# ಗಣಿತ

## ಭಾಗ -1

## ತರಗತಿ

# IV

Mathematics
Part-1
STD-IV
Kannada Medium

ಕೇರಳ ಸರಕಾರ
ಸಾರ್ವಜನಿಕ ಶಿಕ್ಷಣ ಇಲಾಖೆ

ತಯಾರಿಸಿದವರು
ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಮಿತಿ (SCERT) ಕೇರಳ

2025

## ರಾಷ್ಟ್ರಗೀತೆ

ಜನಗಣ ಮನ ಅಧಿನಾಯಕ ಜಯಹೇ,
ಭಾರತ ಭಾಗ್ಯವಿಧಾತಾ,
ಪಂಜಾಬ ಸಿಂಧು ಗುಜರಾತ ಮರಾಠ,
ದ್ರಾವಿಡ ಉತ್ಕಲ ವಂಗ,
ವಿಂಧ್ಯ ಹಿಮಾಚಲ ಯಮುನಾ ಗಂಗಾ,
ಉಚ್ಛಲ ಜಲಧಿತರಂಗ,
ತವಶುಭ ನಾಮೇ ಜಾಗೇ,
ತವಶುಭ ಆಶಿಷ ಮಾಗೇ,
ಗಾಹೇ ತವಜಯ ಗಾಥಾ
ಜನಗಣ ಮಂಗಲದಾಯಕ ಜಯಹೇ
ಭಾರತ ಭಾಗ್ಯವಿಧಾತಾ
ಜಯಹೇ, ಜಯಹೇ, ಜಯಹೇ,
ಜಯ ಜಯ ಜಯ ಜಯಹೇ!

## ಪ್ರತಿಜ್ಞೆ

ಭಾರತವು ನನ್ನ ದೇಶ. ಭಾರತೀಯರೆಲ್ಲರೂ ನನ್ನ ಸಹೋದರ, ಸಹೋದರಿಯರು.

ನಾನು ನನ್ನ ದೇಶವನ್ನು ಪ್ರೀತಿಸುತ್ತೇನೆ. ಅದರ ಸಂಪನ್ನ ಹಾಗೂ ವೈವಿಧ್ಯಪೂರ್ಣವಾದ ಪರಂಪರೆಗೆ ನಾನು ಹೆಮ್ಮೆಪಡುತ್ತೇನೆ.

ನಾನು ನನ್ನ ತಂದೆ, ತಾಯಿ ಮತ್ತು ಗುರುಹಿರಿಯರನ್ನು ಗೌರವಿಸುತ್ತೇನೆ. ಮತ್ತು ಎಲ್ಲರೊಡನೆ ಸೌಜನ್ಯದಿಂದ ವರ್ತಿಸುತ್ತೇನೆ.

ನಾನು ನನ್ನ ದೇಶ ಮತ್ತು ದೇಶದ ಜನರಿಗೆ ನನ್ನ ಶ್ರದ್ಧೆಯನ್ನು ಮುಡಿಪಾಗಿಡುತ್ತೇನೆ. ಅವರ ಕ್ಷೇಮ ಮತ್ತು ಸಮೃದ್ಧಿಯಲ್ಲೇ ನನ್ನ ಆನಂದವಿದೆ.

# ಗಣಿತ

# 4

*Prepared by :*
**State Council of Educational Research and Training (SCERT)**
Poojappura, Thiruvananthapuram 695012, Kerala
Website : www.scertkerala.gov.in
e-mail : scertkerala@gmail.com, Phone : 0471 - 2341883,
Typesetting and Layout : SCERT
First Edition : 2025
*Printed at* : KBPS, Kakkanad, Kochi-30
© Department of General Education, Government of Kerala

ಪ್ರೀತಿಯ ಮಕ್ಕಳೇ,

ಗಣಿತದ ಅನೇಕ ವಿಷಯಗಳನ್ನು ನಾವು ಕಲಿತಿದ್ದೇವೆ. ಸಂಖ್ಯೆಗಳು, ಆಕೃತಿಗಳು, ಸಮಯ, ನಮೂನೆಗಳು ಇತ್ಯಾದಿ ಹಲವು ವಿಷಯಗಳು. ಸಣ್ಣ ಸಂಖ್ಯೆಗಳನ್ನು ಕೂಡಿಸಲು, ಕಳೆಯಲು, ಗುಣಿಸಲು ಮತ್ತು ಭಾಗಿಸಲು ನಾವು ಕಲಿತಿದ್ದೇವೆ. ಗಣಿತ ಅಧ್ಯಯನದ ಮೂಲಕ ನಾವು ಅನೇಕ ಸಾಮರ್ಥ್ಯಗಳನ್ನು ಗಳಿಸಿದ್ದೇವೆ. ಸಂಖ್ಯೆಗಳ ನಡುವಿನ ಹೊಸ ಸಂಬಂಧಗಳನ್ನು ಕಂಡುಹಿಡಿಯುವುದು, ನಮೂನೆಗಳನ್ನು ರೂಪಿಸುವುದು ಮತ್ತು ಪೂರ್ತಿಗೊಳಿಸುವುದು, ಕ್ರಿಯೆಗಳನ್ನು ವಿಶ್ಲೇಷಣೆ ಮಾಡಿ ಬೇರೆ ಬೇರೆ ರೀತಿಗಳನ್ನು ಕಂಡುಹಿಡಿಯುವುದು, ಸಮಸ್ಯೆಗಳನ್ನು ಪರಿಹರಿಸುವುದು ಇತ್ಯಾದಿ ಅನೇಕ ಸಾಮರ್ಥ್ಯಗಳನ್ನು ನಾವು ಗಳಿಸಿಕೊಂಡಿದ್ದೇವೆ. ಇನ್ನೂ ಮುಂದಕ್ಕೆ ನಾವು ಸಾಗಬೇಕಾಗಿದೆ. ದೊಡ್ಡ ದೊಡ್ಡ ಸಂಖ್ಯೆಗಳ ಬಗ್ಗೆ ತಿಳಿದುಕೊಳ್ಳಬೇಕು, ಕಲಿಯಬೇಕು. ಹೊಸ ಸಂಖ್ಯಾ ಸಂಬಂಧಗಳನ್ನು ಕಂಡುಹಿಡಿಯಬೇಕು, ಹೊಸ ನಮೂನೆಗಳನ್ನು ಪೂರ್ತಿಗೊಳಿಸಬೇಕು, ರೂಪಿಸಬೇಕು, ಗಣಕ ಚಿಂತನೆಗಳನ್ನು ಉಪಯೋಗಿಸಿಕೊಳ್ಳಬೇಕು. ಇದಕ್ಕಾಗಿ ನಾವು ಹೊಸ ಗಣಿತ ವಿಧಾನಗಳ ಮೂಲಕ ಇನ್ನಷ್ಟು ಎತ್ತರಕ್ಕೆ ಸಾಗೋಣ.

ಶುಭಹಾರೈಕೆಗಳೊಂದಿಗೆ,

ಡಾ. ಜಯಪ್ರಕಾಶ್ ಆರ್. ಕೆ.
ನಿರ್ದೇಶಕರು
ಎಸ್.ಸಿ.ಇ.ಆರ್.ಟಿ., ಕೇರಳ

# TEXTBOOK DEVELOPMENT TEAM

## Advisor

**Dr. E Krishnan**
Head, Department of Mathematics (Rtd.)
University College, Thiruvananthapuram

## Chairperson

**Dr. Gokuladasan Pillai C**
Curriculum Head (Rtd.), SCERT

## Experts

**Dr. Rajesh K P**
Senior Lecturer, DIET, Kannur

**Prakashan V K**
Principal (Rtd.), DIET, Kottayam

## Members

**Swaminathan K**
Headmaster (Rtd.) Govt. LP School, Palode, Thiruvananthapuram

**Biju T**
Headmaster
Govt. SMVLPS
Tevalakkara, Kollam

**Ayswarya Soman**
SMSG, UPS
Chandanakunnu
Pathanamthitta

**Premjith V R**
HST Maths, GVHSS
Payyoli, Kozhikode

**Bhagyesh K**
SVMGUPS
Edathodu, Kasaragod

**Sreevisakhan**
Headmaster (Rtd.)
GLP school
Cherukulathur, Kozhikode

**Beena Stephen**
SPTPM, Govt. UPS
Kuravankonam
Thiruvananthapuram

**Jiji Varghese P**
Trainer, BRC
Edappal

**Anoop K P**
Art teacher
PMSAPTHSS, Kakkov,
Vazhayur, Malappuram

**Shaji C K**
Art teacher
GHSS Naduvannur
Kozhikode

**Deepesh T**
Art teacher
CHMHSS Kavumpady
Kannur

## Kannada Version

## Experts

**Nandikeshan N**
D.D.E. (Rtd.), Kasaragod

**Ashoka M**
Headmaster, G.H.S.S.
Kundamkuzhy, Kasaragod

## Members

**Shylesh M**
Headmaster, S.S.A.L.P.S.
Mudoorthoke

**Gururaj K**
G.H.S. Udyawar,
Kasaragod

**Devananda K**
G.L.P.S. Majibail,
Kasaragod

**Melvin D Souza P**
G.H.S.S. Bekur, Kasaragod

---

## Academic Coordinator

**Dr. Selvamari S**
**Research Officer, SCERT**

---

**State Council of Educational Research and Training (SCERT)**
Vidyabhavan, Poojappura, Thiruvananthapuram 695012

# ಅನುಕ್ರಮಣಿಕೆ


| | | |
|---|---|---|
| 1. | ಗೆರೆಗಳೂ ಆಕೃತಿಗಳೂ | 07 |
| 2. | ಸಾವಿರಕ್ಕಿಂತಲೂ ಆಚೆಗೆ | 19 |
| 3. | ಅದೆಷ್ಟು ಸಂಖ್ಯೆಗಳು | 35 |
| 4. | ಹೆಚ್ಚಾಗುವ ಗುಂಪು | 47 |
| 5. | ಸಮಯವಾಯಿತು | 63 |
| 6. | ಕಡಿಮೆಯಾಗುವ ಗುಂಪು | 77 |




ಪುಸ್ತಕದಲ್ಲಿ **‘ಲೆಕ್ಕ ಮಾಡಿ ನೋಡುವ’** ಎಂಬ ಚಟುವಟಿಕೆಗೆ ಈ ಚಿಹ್ನೆಯನ್ನು ಉಪಯೋಗಿಸಲಾಗಿದೆ.

# ಭಾರತದ ಸಂವಿಧಾನ

## ಪ್ರಸ್ತಾವನೆ

ಭಾರತದ ಜನಗಳಾದ ನಾವು ಭಾರತವನ್ನು ಒಂದು [1]**[ಸಾರ್ವಭೌಮ ಸಮಾಜವಾದೀ ಸರ್ವಧರ್ಮ ಸಮಭಾವದ ಪ್ರಜಾಸತ್ತಾತ್ಮಕ ಗಣರಾಜ್ಯವಾಗಿ]** ರಚಿಸಲು ಮತ್ತು ಅದರ ಸಮಸ್ತ ನಾಗರಿಕರಿಗೆ:

ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ **ನ್ಯಾಯ** ;
ವಿಚಾರ, ಅಭಿವ್ಯಕ್ತಿ, ವಿಶ್ವಾಸ, ಧರ್ಮಶ್ರದ್ಧೆ ಮತ್ತು ಉಪಾಸನಾ **ಸ್ವಾತಂತ್ರ್ಯ** ;
ಸ್ಥಾನಮಾನ ಹಾಗೂ ಅವಕಾಶ **ಸಮಾನತೆ ;**

ದೊರೆಯುವಂತೆ ಮಾಡಲು ಮತ್ತು ವ್ಯಕ್ತಿ ಗೌರವವನ್ನು,[2][ರಾಷ್ಟ್ರದ ಏಕತೆಯನ್ನು ಹಾಗೂ ಅಖಂಡತೆಯನ್ನು] ಸುನಿಶ್ಚಿತಗೊಳಿಸಿ ಅವರಲ್ಲಿ **ಭ್ರಾತೃಭಾವನೆಯನ್ನು** ವೃದ್ಧಿಗೊಳಿಸಲು; ಶ್ರದ್ಧಾಪೂರ್ವಕ ಸಂಕಲ್ಪ ಮಾಡಿದವರಾಗಿ;

**ನಮ್ಮ ಸಂವಿಧಾನ ಸಭೆಯಲ್ಲಿ** 1949ನೆಯ ಇಸವಿ ನವೆಂಬರ್ ತಿಂಗಳ ಇಪ್ಪತ್ತಾರನೆಯ ತಾರೀಖಾದ ಈ ದಿವಸ **ಈ ಮೂಲಕ ಈ ಸಂವಿಧಾನವನ್ನು ಅಂಗೀಕರಿಸಿ, ಅಧಿನಿಯಮಿಸಿ ಅರ್ಪಿಸಿಕೊಂಡಿದ್ದೇವೆ.**

1. 1976ನೇ ಇಸವಿಯ ಭಾರತ ಸಂವಿಧಾನ (ನಲವತ್ತೆರಡನೆಯ ತಿದ್ದುಪಡಿ) ಅಧಿನಿಯಮದ 2ನೇ ಪ್ರಕರಣದ ಮೇರೆಗೆ “ಸಂಪೂರ್ಣ ಪ್ರಭುತ್ವ ಸಂಪನ್ನ ಲೋಕತಂತ್ರಾತ್ಮಕ ಗಣರಾಜ್ಯವಾಗಿ" ಎಂಬ ಪದಗಳ ಬದಲಾಗಿ (3-1-1977 ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.
2. ಮೇಲ್ಕಂಡ ಅಧಿನಿಯಮದ 2ನೇ ಪ್ರಕರಣದ ಮೇರೆಗೆ "ರಾಷ್ಟ್ರದ ಏಕತೆಯನ್ನೂ” ಎಂಬ ಪದಗಳ ಬದಲಾಗಿ (3 - 1 - 1977ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.

# 1

# ಗೆರೆಗಳೂ ಆಕೃತಿಗಳೂ




ಚಿತ್ರವನ್ನು ನೋಡಿರಿ.
ಏನೆಲ್ಲಾ ಕಾಣುತ್ತಿದೆ?
ಸ್ನೇಹಿತರೊಂದಿಗೆ ಚರ್ಚಿಸಿರಿ...
ನೋಟ್ ಪುಸ್ತಕದಲ್ಲಿ ಬರೆಯಿರಿ...

## ಚಿತ್ರ ನೋಡಿರಿ... ರಚಿಸಿರಿ...

ಮೊದಲ ಪುಟದಲ್ಲಿರುವ ಚಿತ್ರವನ್ನು ನೋಡಿದಿರಲ್ಲವೇ...
ಆವರಣ ಗೋಡೆಯಲ್ಲಿರುವ ಚಿತ್ರಗಳನ್ನು ಗಮನಿಸಿದ್ದೀರಾ?

ಅವುಗಳಲ್ಲಿ ನಿಮಗೆ ಇಷ್ಟವಾದ ಚಿತ್ರವನ್ನು ರಚಿಸಿರಿ...

ನಾನು ರಚಿಸಿದ್ದು

## ದಿನಾಚರಣೆ

ಕಡಲುಕಾಣಿ ಶಾಲೆಯಲ್ಲಿ ಜೂನ್ 8 ರಂದು ಜರಗುವ ದಿನಾಚರಣೆ ಯಾವುದು?

## ಬಣ್ಣ ಹಚ್ಚಿರಿ

ಆಚರಣೆಯ ಅಂಗವಾಗಿ ಶಾಲೆಯಲ್ಲಿ ಪ್ರದರ್ಶನವನ್ನು ಆಯೋಜಿಸಲಾಗಿದೆ. ಅನು, ಸುಬಿ ಮತ್ತು ಅತುಲ್ ಶಾಲೆ ಹಾಗೂ ಪರಿಸರವನ್ನು ಅಲಂಕರಿಸಲು ವಿವಿಧ ರೀತಿಯ ಕಾಗದ ಮೀನುಗಳನ್ನು ತಯಾರಿಸಿದರು.





ಅವರು ತಯಾರಿಸಿದ ಕಾಗದ ಮೀನುಗಳನ್ನು ದಾರದಲ್ಲಿ ನೇತಾಡಿಸಿರುವುದನ್ನು ನೋಡಿರಿ...



ಚಿತ್ರಗಳಿಗೆ ಬಣ್ಣ ಹಚ್ಚಿ ಅಂದಗೊಳಿಸಿರಿ...

## ರಚಿಸಿರಿ... ಬಣ್ಣ ಹಚ್ಚಿರಿ...

ಕೊಟ್ಟಿರುವ ಆಕೃತಿಯೊಂದಿಗೆ ಇತರ ಆಕೃತಿಗಳನ್ನು ರಚಿಸಿ ಮೀನಿನ ಚಿತ್ರವನ್ನು ಪೂರ್ಣಗೊಳಿಸಿರಿ... ಬಣ್ಣ ನೀಡಿರಿ...





## ಹಲವು ಆಕೃತಿಗಳು...

ಕಾಗದ ಮೀನುಗಳಲ್ಲಿ ಕಂಡ ಆಕೃತಿಗಳು ಯಾವುವು?



ನಿಮಗೆ ತಿಳಿದಿರುವ ಆಕೃತಿಗಳನ್ನು ರಚಿಸಿ ಪಟ್ಟಿಯನ್ನು ಪೂರ್ತಿಗೊಳಿಸಿರಿ.

| ಆಕೃತಿ | ಹೆಸರು |
|---|---|
|  | |
| | |
| | |

## ಮಡಲಕಡ್ಡಿ ಮೀನು




ಅತುಲ್ ಮಡಲಕಡ್ಡಿಗಳನ್ನು ಕಾಗದದಲ್ಲಿ ಅಂಟಿಸಿ ತಯಾರಿಸಿದ ಮೀನನ್ನು ಚಿತ್ರದಲ್ಲಿ ಕೊಡಲಾಗಿದೆ. ಈ ರೀತಿಯ ಆಕೃತಿಗಳನ್ನು ನೀವು ತಯಾರಿಸಿರಿ. ದಿನಾಚರಣೆಗಳಿಗೆ ಅವುಗಳನ್ನು ಉಪಯೋಗಿಸುವಿರಲ್ಲವೇ...

## ಬಣ್ಣದ ಚಿಟ್ಟೆ

ದಿನಾಚರಣೆಗಾಗಿ ಶಾಲೆ ಮತ್ತು ತರಗತಿಗಳನ್ನು ಅಲಂಕರಿಸಬೇಕಾಗಿದೆ. ಅದಕ್ಕಾಗಿ ಹೊಸ ಆಕೃತಿಗಳನ್ನು ರಚಿಸುವ.

ವಿವಿಧ ಆಕೃತಿಗಳನ್ನು ಉಪಯೋಗಿಸಿ ರಚಿಸಿದ ಚಿಟ್ಟೆಯನ್ನು ನೋಡಿರಿ. ಬಣ್ಣ ಹಚ್ಚಿ ಚಿಟ್ಟೆಯನ್ನು ಅಂದಗೊಳಿಸಿರಿ..



ಚಿಟ್ಟೆಯಲ್ಲಿನ ಆಕೃತಿಗಳು ಯಾವುವು ಎಂದು ಬರೆಯಿರಿ.

**ಪಝುಲ್ ಕಾರ್ನರ್**

ನನ್ನನ್ನು ರಚಿಸಲು 3 ಗೆರೆಗಳು ಸಾಕು. ನಾನು ಯಾರು?

## ಬದಿಗಳನ್ನು ಅಳೆಯುವ

ಗಣಿತ ಪೆಟ್ಟಿಗೆಯಲ್ಲಿರುವ ಒಂದು ಆಯತ ಕಾರ್ಡ್ ಉಪಯೋಗಿಸಿ ಆಯತವನ್ನು ರಚಿಸಿರಿ.

ನಾನು ರಚಿಸಿದ್ದು

ಒಂದು ಆಯತಕ್ಕೆ ಎಷ್ಟು ಬದಿಗಳಿವೆ? ________________

ಮೂಲೆಗಳೆಷ್ಟು? ________________

ನೀವು ರಚಿಸಿದ ಆಯತದ ಬದಿಗಳ ಉದ್ದವನ್ನು ಸ್ಕೇಲ್ ಉಪಯೋಗಿಸಿ ಅಳೆದು ಬರೆಯಿರಿ.

| ಬದಿ 1 | ಬದಿ 2 | ಬದಿ 3 | ಬದಿ 4 |
|---|---|---|---|
| .................. ಸೆಂಟಿಮೀಟರ್ | .................. ಸೆಂಟಿಮೀಟರ್ | .................. ಸೆಂಟಿಮೀಟರ್ | .................. ಸೆಂಟಿಮೀಟರ್ |

ಏನಾದರು ಪ್ರತ್ಯೇಕತೆಗಳಿವೆಯೇ? ನೀವು ಕಂಡುಕೊಂಡದ್ದನ್ನು ಬರೆಯಿರಿ...

ನಾನು ಕಂಡುಕೊಂಡದ್ದು

## ಮಡಲಕಡ್ಡಿ ಆಯತ

ಅತುಲ್, ಬಿನ್ನಾ ಎಂಬಿವರು 5 ಸೆಂಟಿಮೀಟರ್, 8 ಸೆಂಟಿಮೀಟರ್ ಉದ್ದವಿರುವ ಎರಡೆರಡು ಮಡಲಕಡ್ಡಿಗಳನ್ನು ಉಪಯೋಗಿಸಿ ರಚಿಸಿದ ಆಕೃತಿಗಳನ್ನು ನೋಡಿರಿ.



ಅತುಲ್





ಬಿನ್ನಾ



ಯಾರು ರಚಿಸಿದ ಆಕೃತಿಯು ಆಯತವಾಗಿದೆ? ಯಾಕೆ?

ಅತುಲ್ ರಚಿಸಿದ ಆಯತದ ಎಡ ಮತ್ತು ಬಲ ಬದಿಗಳು ನೆಟ್ಟಗೆ ಇವೆ.

ಬಿನ್ನಾ ರಚಿಸಿದ ಆಕೃತಿಯು ಆಯತವಲ್ಲ. ಯಾಕೆ?

**ನಾನು ಕಂಡುಕೊಂಡದ್ದು**

## ಆಯತದ ವಿಶೇಷತೆಗಳು

ಆಯತದ ವಿಶೇಷತೆಗಳನ್ನು ಬರೆಯಿರಿ...

- ಆಯತಕ್ಕೆ 4 ಬದಿಗಳಿವೆ.
- ಮೇಲಿನ ಮತ್ತು ಕೆಳಗಿನ ಗೆರೆಗಳು ಅಡ್ಡಕ್ಕೂ, ಎಡ ಮತ್ತು ಬಲಬದಿಗಳು ನೆಟ್ಟಗೆಯೂ ಆಗಿವೆ.
- 
- 

## ಹಲವು ರೀತಿಯ ಆಯತಗಳು

ಗಣಿತ ಪೆಟ್ಟಿಗೆಯಲ್ಲಿರುವ ಆಯತ ಕಾರ್ಡ್‌ಗಳನ್ನು ಉಪಯೋಗಿಸಿ ಅನೂಪ್ ರಚಿಸಿದ ಆಯತಗಳನ್ನು ಕೆಳಗೆ ಕೊಡಲಾಗಿದೆ.






ಆಯತ 1




ಆಯತ 2




ಆಯತ 3




ಆಯತ 4

ಸ್ಕೇಲ್ ಉಪಯೋಗಿಸಿ ಬದಿಗಳನ್ನು ಅಳೆದು ಅವುಗಳನ್ನು ಪಟ್ಟಿಯಲ್ಲಿ ಬರೆಯಿರಿ.

| ಆಯತ | ಬದಿ 1 (ಸೆ.ಮೀ.) | ಬದಿ 2 (ಸೆ.ಮೀ.) | ಬದಿ 3 (ಸೆ.ಮೀ.) | ಬದಿ 4 (ಸೆ.ಮೀ.) |
|---|---|---|---|---|
| 1 | | | | |
| 2 | | | | |
| 3 | | | | |
| 4 | | | | |

ಅಳತೆಗಳ ಪ್ರತ್ಯೇಕತೆಗಳು ಯಾವುವು?

**ನಾನು ಕಂಡುಕೊಂಡದ್ದು**

## ಇನ್ನೊಂದು ಆಯತ

ಹಲವು ರೀತಿಯ ಆಯತಗಳನ್ನು ನೋಡಿದಿರಲ್ಲವೇ. ಅವುಗಳಲ್ಲಿ ಮೂರು ಮತ್ತು ನಾಲ್ಕನೇ ಆಯತಗಳನ್ನು ನೋಡಿರಿ...




**ಪಝ್ಲ್ ಕಾರ್ನರ್**

**ಎಷ್ಟು ಮೂಲೆಗಳು?**

ಒಂದು ಆಯತಾಕಾರದ ಕಾಗದದ ಒಂದು ಮೂಲೆಯನ್ನು ಕತ್ತರಿಸಿ ತೆಗೆಯಲಾಯಿತು. ಈಗ ಕಾಗದಕ್ಕೆ ಎಷ್ಟು ಮೂಲೆಗಳಿವೆ?

ನೀವು ತೆಗೆದುಕೊಂಡ ಮಡಲಕಡ್ಡಿಗಳ ಉದ್ದದ ಪ್ರತ್ಯೇಕತೆಯೇನು?

ಚೌಕದ ಪ್ರತ್ಯೇಕತೆಗಳನ್ನು ಬರೆಯಿರಿ...

**ನಾನು ಕಂಡುಕೊಂಡದ್ದು**

- 4 ಬದಿಗಳಿವೆ.
- 
- 
- 

**ಚೌಕ**

ನಾಲ್ಕು ಬದಿಗಳ ಉದ್ದವು ಸಮಾನವಾಗಿರುವ ಆಯತವು ಚೌಕವಾಗಿದೆ.

ಎಲ್ಲ ಚೌಕಗಳೂ ಆಯತಗಳಾಗಿವೆ. ಆದರೆ ಎಲ್ಲ ಆಯತಗಳೂ ಚೌಕಗಳಲ್ಲ.

## ಆಯತದೊಳಗೆ ಚೌಕ

ಈ ಆಯತದ ಒಳಗೆ ಒಂದು ಗೆರೆಯನ್ನು ಮಾತ್ರ ಎಳೆದು ಚೌಕವನ್ನು ರಚಿಸಿರಿ.

## ಚೌಕ ಪೆಟ್ಟಿಗೆಯನ್ನು ಮಾಡೋಣ

ಚಿತ್ರದಲ್ಲಿರುವಂತೆ ಚೌಕಗಳನ್ನು ದಪ್ಪ ಕಾಗದಗಳಲ್ಲಿ ರಚಿಸಿ ಅವುಗಳನ್ನು ಕತ್ತರಿಸಿ ತೆಗೆಯಿರಿ. ಟೀಚರರ ಸಹಾಯದಿಂದ ಚೌಕಪೆಟ್ಟಿಗೆಯನ್ನು ತಯಾರಿಸಿರಿ.





## ಜಿಯೋಬೋರ್ಡ್

ಗಣಿತ ಲ್ಯಾಬ್‌ನಲ್ಲಿರುವ ಜಿಯೋಬೋರ್ಡಿನಲ್ಲಿ ರಬ್ಬರ್ ಬ್ಯಾಂಡ್ ಉಪಯೋಗಿಸಿ ಆಯತಗಳು ಮತ್ತು ಚೌಕಗಳನ್ನು ರಚಿಸಿರಿ. ಅವುಗಳ ಬದಿಗಳ ಉದ್ದವನ್ನು ಕಂಡುಹಿಡಿಯಿರಿ.

ಒಂದು ಆಣಿ ಮತ್ತು ಅದಕ್ಕೆ ಅತ್ಯಂತ ಸಮೀಪದಲ್ಲಿರುವ 3 ಆಣಿಗಳನ್ನು ಸೇರಿಸಿ ರಬ್ಬರ್ ಬ್ಯಾಂಡ್ ಹಾಕಿದರೆ ಯಾವ ಆಕೃತಿ ದೊರೆಯುವುದು?

______________________



## ಗಣಿತ ಕ್ಲಬ್

ಗೆಳೆಯರು ಗಣಿತ ಕ್ಲಬ್ ಉದ್ಘಾಟನೆಗೆ ತರಗತಿಯನ್ನು ಅಲಂಕರಿಸಿರುವುದನ್ನು ನೋಡಿರಿ...



ಚಿತ್ರದಲ್ಲಿ ಯಾವ ಯಾವ ಆಕೃತಿಗಳಿವೆ?

ಅಲಂಕಾರಕ್ಕಾಗಿ ಅವರು ಉಪಯೋಗಿಸಿದ ಕೆಲವು ಆಕೃತಿಗಳನ್ನು ಕೆಳಗೆ ಕೊಡಲಾಗಿದೆ. ಆಕೃತಿಯ ಕೆಳಗೆ ಅವುಗಳ ಹೆಸರು ಬರೆಯಿರಿ.



## ಕಂಡುಹಿಡಿಯುವ

ಸುತ್ತಮುತ್ತಲೂ ಕಾಣುವ ಮತ್ತು ನಿಮಗೆ ಪರಿಚಿತವಿರುವ ವಸ್ತುಗಳನ್ನು ಅವುಗಳ ಆಕೃತಿಯ ಆಧಾರದಲ್ಲಿ ಪಟ್ಟಿ ಮಾಡಿರಿ. ವಸ್ತುಗಳ ಹೆಸರುಗಳನ್ನು ಕೆಳಗೆ ಬರೆಯಿರಿ.

| ಆಯತಗಟ್ಟಿ | ಗೋಲ | ಚೌಕಗಟ್ಟಿ | ಶಂಕು |
|---|---|---|---|
| | | | |

## ಟಾನ್ ಗ್ರಾಂ

ಚಿತ್ರದಲ್ಲಿರುವ ವಿವಿಧ ಆಕೃತಿಗಳನ್ನು ಕ್ರಮೀಕರಿಸಿದ ಚಿತ್ರಗಳು ಪಾಠ ಪುಸ್ತಕದ ಹಿಂದಿನ ಮುಖಪುಟದಲ್ಲಿದೆ. ಟಾನ್ ಗ್ರಾಂನ ಆಕೃತಿಗಳನ್ನು ಉಪಯೋಗಿಸಿ ಹೊಸ ಚಿತ್ರಗಳನ್ನು ರಚಿಸಿರಿ.



1. ಕೆಳಗೆ ಕೊಟ್ಟಿರುವ ಚಿತ್ರಗಳಲ್ಲಿ ಆಯತಕ್ಕೆ ಸರಿ (✓) ಗುರುತು ಹಾಕಿರಿ. ಚೌಕಕ್ಕೆ ಕೆಂಪು ಬಣ್ಣವನ್ನು ಹಚ್ಚಿರಿ.



2. ಮನು ಶುಭಾಶಯ ಪತ್ರ ತಯಾರಿಸುತ್ತಿದ್ದಾನೆ. ಬದಿಗಳ ಉದ್ದವು 8 ಸೆಂಟಿಮೀಟರ್ ಆಗಿರುವ ಒಂದು ಚೌಕ ಕಾರ್ಡಿನ 4 ಬದಿಗಳಿಗೂ ಕಂಬಳಿನೂಲನ್ನು ಅಂಟಿಸಲಾಯಿತು. ಮನು ಉಪಯೋಗಿಸಿದ ನೂಲಿನ ಒಟ್ಟು ಉದ್ದ ಎಷ್ಟು?

3. ಆಯತ ಕಾರ್ಡ್ ಉಪಯೋಗಿಸಿ ನೋಟ್ ಪುಸ್ತಕದಲ್ಲಿ ಒಂದು ಆಯತವನ್ನು ರಚಿಸಿರಿ. ಚಿಕ್ಕ ಬದಿಗೆ ತಾಗಿರುವಂತೆ ಒಂದು ಚೌಕವನ್ನು ಮತ್ತು ದೊಡ್ಡ ಬದಿಗೆ ತಾಗಿರುವಂತೆ ಇನ್ನೊಂದು ಚೌಕವನ್ನೂ ಸ್ಕೇಲ್ ಉಪಯೋಗಿಸಿ ರಚಿಸಿರಿ. ಬದಿಗಳನ್ನು ಅಳೆದು ಬರೆಯಿರಿ

4. ಕೆಳಗೆ ಕೊಟ್ಟಿರುವ ಅಳತೆಗಳಲ್ಲಿ ಆಯತವನ್ನು ರಚಿಸಲು ಸಾಧ್ಯವಿರುವ ಅಳತೆಗಳು ಯಾವುವು?

   A) 5, 8, 6, 7 B) 5, 6, 7, 9 C) 5, 8, 5, 8 D) 8, 8, 5, 8

5. ಕೆಳಗೆ ಕೊಟ್ಟಿರುವ ಅಳತೆಗಳಲ್ಲಿ ಚೌಕವನ್ನು ರಚಿಸಲು ಸಾಧ್ಯವಿಲ್ಲದ ಅಳತೆಗಳು ಯಾವುವು?

   A) ಬದಿಗಳ ಉದ್ದ 8 ರಂತೆ B) 5, 5, 5, 5

   C) 4 ಬದಿಗಳೂ 6 ರಂತೆ D) 5, 5, 6, 6

6.



__________ ಮುಂದಿನ ಚಿತ್ರ ಯಾವುದು?



(A) (B) (C) (D)

# 2

# ಸಾವಿರಕ್ಕಿಂತಲೂ ಆಚೆಗೆ



## ಸಂಖ್ಯಾ ಸಂಬಂಧವನ್ನು ಕಂಡುಹಿಡಿಯಿರಿ...

ಸಂಬಂಧವನ್ನು ಕಂಡುಹಿಡಿದು ಖಾಲಿಯಿರುವ ಕೋಣೆಗಳಲ್ಲಿ ಸಂಖ್ಯೆಗಳನ್ನು ಬರೆಯಿರಿ.

| | | | | | | | | | |
|---|---|---|---|---|---|---|---|---|---|
| 9 | 100 | ........ | 199 | ........ | 500 | ........ | 909 | ........ | 999 |
| 10 | 101 | 110 | ........ | 280 | ........ | 667 | ........ | 990 | ........ |

## ಟೋಟೋ ಕಾರಿಗೆ ಬಣ್ಣ ಹಚ್ಚಿರಿ...

ನೀವು ಬರೆದ ಸಂಖ್ಯೆಗಳನ್ನು ಕೆಳಗಿನ ಚಿತ್ರದಲ್ಲಿ ಗುರುತಿಸಿರಿ. ಆ ಕೋಣೆಗಳಿಗೆ ಬಣ್ಣ ಹಚ್ಚಿರಿ.




## ನಂಬರ್ ಪ್ಲೇಟ್

ಇವರು ಟೋಟೋ ಕಾರಿನ ಗೆಳೆಯರು. ಸೂಚನೆಗಳ ಸಹಾಯದಿಂದ ಸಂಖ್ಯೆಯನ್ನು ಕಂಡುಹಿಡಿದು ನಂಬರ್ ಪ್ಲೇಟಿನಲ್ಲಿ ಬರೆಯಿರಿ.

| | | | |
|---|---|---|---|
| **8** ನೂರು<br>**4** ಹತ್ತು<br>**2** ಒಂದು | **910** ಕ್ಕಿಂತ<br>ಒಂದು ಕಡಿಮೆ | ಅತಿ ದೊಡ್ಡ<br>ಮೂರಂಕೆ ಸಂಖ್ಯೆ | ಅತಿ ದೊಡ್ಡ<br>ಎರಡಂಕೆ ಸಂಖ್ಯೆಗೆ<br>ಒಂದು ಕೂಡಿಸಿದ್ದು |






## ಅಬ್ಬಬ್ಬಾ... ಸಾವಿರ

ನನ್ನ ನಂಬರ್ ಓದಿರಿ.




ನನ್ನ ನಂಬರ್ ಅತ್ಯಂತ ಚಿಕ್ಕ ನಾಲ್ಕಂಕೆ ಸಂಖ್ಯೆಯಾಗಿದೆ.

## ಗೆರೆ ಎಳೆದು ಜೋಡಿಸಿರಿ

ಬಾಯಿಲೆಕ್ಕವಾಗಿ ಮಾಡಿರಿ.

ಯಾವ ಯಾವ ವಾಹನಗಳ ನಂಬರ್‌ಗಳನ್ನು ಕೂಡಿಸಿದರೆ ಟೋಟೋಕಾರಿನ ನಂಬರ್ ಸಿಗುತ್ತದೆ? ಗೆರೆ ಎಳೆದು ಜೋಡಿಸಿರಿ...

 505 | 250 

 999 | 100 

 750 | 1 

 990 | 495 

 900 | 10 

## ಇನ್ನೂ ಒಂದು ಸೇರಿದಾಗ




ಅಬಾಕಸ್‌ನಲ್ಲಿರುವ ಸಂಖ್ಯೆ ಯಾವುದು? ______

ಇನ್ನೂ ಒಂದನ್ನು ಕೂಡಿಸಿದರೆ? ______

ಈ ಸಂಖ್ಯೆಯನ್ನು ಕೆಳಗಿನ ಅಬಾಕಸ್‌ನಲ್ಲಿ ಚಿತ್ರಿಸಿರಿ...




**ಪಝಲ್ ಕಾರ್ನರ್**

**ನಾನು ಯಾರು?**

ಅಬಾಕಸ್‌ನಲ್ಲಿ ಒಂದು ಮಣಿ.
ಅತ್ಯಂತ ದೊಡ್ಡ ಮೂರಂಕೆ ಸಂಖ್ಯೆಗಿಂತ
ದೊಡ್ಡವನು. ನಾನು ಯಾರು?
ಅಬಾಕಸ್‌ನಲ್ಲಿ ನನ್ನ ಸ್ಥಾನ ಯಾವುದು?

## ಪೆಟ್ರೋಲ್ ಪಂಪ್

ಕಾರು ಓಟ ಸ್ಪರ್ಧೆಯಲ್ಲಿ ಭಾಗವಹಿಸುವ ಪ್ರತಿಯೊಂದು ಕಾರು 1000 ರೂಪಾಯಿಗಳ ಪೆಟ್ರೋಲ್ ತುಂಬಿಸಿದವು.






ಟೋಟೋ ಕಾರು 100 ರೂಪಾಯಿಗಳ ನೋಟುಗಳನ್ನು ನೀಡಿತು. ಎಷ್ಟು ನೋಟುಗಳು?

______




ಟೋಮೋ ಕಾರು 10 ರೂಪಾಯಿಗಳ ಒಂದು ಕಟ್ಟು ನೋಟನ್ನು ನೀಡಿತು. ಎಷ್ಟು ನೋಟುಗಳು?

______



ಬಗ್ಗಿ ಕಾರು ಒಂದು ರೂಪಾಯಿಯ ನಾಣ್ಯಗಳನ್ನು ನೀಡಿತು. ಎಷ್ಟು ನಾಣ್ಯಗಳು?

______

## ಕಾರು ಓಟ ಸ್ಪರ್ಧೆ

ರೇಸ್ ಸರ್ಕ್ಯೂಟಿನಲ್ಲಿ ಕಾರುಗಳ ಓಟ ಸ್ಪರ್ಧೆ ಜರಗುತ್ತಿದೆ. ಒಂದು ಸುತ್ತು ಮುಗಿದರೆ 1000 ಅಂಕಗಳು ದೊರೆಯುತ್ತವೆ.

ಪ್ರತಿಯೊಂದು ಕಾರು ಓಡಿ ಪೂರ್ಣಗೊಳಿಸಿದ ಸುತ್ತುಗಳನ್ನು ಕೊಡಲಾಗಿದೆ. ಅಂಕಗಳನ್ನು ಲೆಕ್ಕಹಾಕಿರಿ.




| ಕಾರಿನ ಹೆಸರು | ಸುತ್ತು | ಅಂಕ |
|---|---|---|
|  ಮಿಕ್ಕಿ | 1 | |
|  ಸ್ಕೈಬಿ | 5 | |
|  ಬಗ್ಗಿ | 3 | |
|  ಆಲ್ಫ | 6 | |
|  ಟೋಮೋ | 7 | |
|  ಫ್ಲೋರ | 4 | 4000 |
|  ಫ್ರೆಡಿ | 8 | |
|  ಸ್ಪೀಡಿ | 9 | |
|  ಟೋಟೋ | 10 | |
|  ಬೋಣಿ | 2 | |

ಲಭಿಸಿದ ಅಂಕಗಳ ಆಧಾರದಲ್ಲಿ ಕಾರುಗಳನ್ನು ಕ್ರಮೀಕರಿಸಿ ನೋಟ್ ಪುಸ್ತಕದಲ್ಲಿ ಬರೆಯಿರಿ. ಯಾವ ಯಾವ ರೀತಿಗಳಲ್ಲಿ ಕ್ರಮೀಕರಿಸಬಹುದು?

## ಮೆಟ್ಟಿಲು ಹತ್ತುವ

ಮೆಟ್ಟಿಲುಗಳಲ್ಲಿರುವ ಎಲ್ಲ ಸಂಖ್ಯೆಗಳನ್ನು ಬರೆಯಿರಿ.




ಸ್ಕೈಬಿ ಕಾರು ಗಳಿಸಿದ ಅಂಕಗಳನ್ನು ಅಬಾಕಸ್‌ನಲ್ಲಿ ಚಿತ್ರಿಸಿರಿ.




ಐದು ಸಾವಿರಗಳು ಸೇರಿದರೆ ಐದುಸಾವಿರ (5000) ಎನ್ನುತ್ತಾರೆ.

ಸ್ಪೀಡಿ ಕಾರು ಗಳಿಸಿದ ಅಂಕಗಳನ್ನು ಅಬಾಕಸ್‌ನಲ್ಲಿ ಚಿತ್ರಿಸಿರಿ.




ಒಂಬತ್ತು ಸಾವಿರಗಳು ಸೇರಿದರೆ ಒಂಬತ್ತು ಸಾವಿರ.

ಹತ್ತು ಸಾವಿರಗಳು ಸೇರುವಾಗ ಹತ್ತುಸಾವಿರ ಎಂದು ಹೇಳುವರು

ಇಪ್ಪತ್ತು ಸಾವಿರಗಳು ಸೇರುವಾಗಲೋ?

______________

## ಇತರ ಮೊತ್ತಗಳನ್ನು ಬರೆಯುವ

| ಹತ್ತು (10) | ನೂರು (100) | ಸಾವಿರ (1000) | ಹತ್ತುಸಾವಿರ (10000) |
|---|---|---|---|
| 5 + 5 | 50 + 50 | 500 + 500 | 5000 + 5000 |
| 6 + 4 | | | |
| 7 + 3 | | | |
| | 80 + 20 | | |
| | | | |

## ಸ್ಪೀಡೋಮೀಟರ್

ಕಾರು ಓಟ ಸ್ಪರ್ಧೆ ಆರಂಭವಾಗುವ ಮೊದಲು ಟೋಟೋ ಕಾರು 1000 ಕಿಲೋಮೀಟರ್ ಓಡಿತ್ತು. ಸ್ಪರ್ಧೆಯ ಒಂದು ಸುತ್ತು ಎಂದರೆ ಒಂದು ಕಿಲೋಮೀಟರ್ ಆಗಿದೆ.




## ಪಟ್ಟಿ ಪೂರ್ತಿಗೊಳಿಸಿರಿ.

| ಸುತ್ತು | ಸ್ಪೀಡೋಮೀಟರ್ |
|---|---|
| 1 | 1000 + 1 = 1001 |
| 2 | 1000 + 2 = 1002 |
| ................ | ......................... |
| ................ | ......................... |
| ................ | ......................... |
| ................ | ......................... |
| ................ | ......................... |

11 ಸುತ್ತು ಓಡಿದರೆ ಸ್ಪೀಡೋಮೀಟರ್ ನಲ್ಲಿ ಎಷ್ಟಾಗಬಹುದು?

______________

15 ಸುತ್ತು ಓಡಿದರೆ?

______________

25 ಸುತ್ತು ಓಡಿದರೋ?

______________

## ಬರೆಯುವ... ಚಿತ್ರಿಸುವ... ಓದುವ...

| | | | | |
|---|---|---|---|---|
|  ಸಾವಿರ ಒಂದು | 1000 ಮತ್ತು 1 | 1 0 0 0<br>1<br>1 0 0 1 | ಸಾವಿರದ ಒಂದು<br>1001 | ಸಾ ನೂ ಹ ಒ |
|  ಸಾವಿರ ಎರಡು | 1000 ಮತ್ತು 2 | | ಸಾವಿರದ ಎರಡು<br>1002 | ಸಾ ನೂ ಹ ಒ |
|  ಸಾವಿರ ನಾಲ್ಕು | | | | ಸಾ ನೂ ಹ ಒ |
|  ಸಾವಿರ ಆರು | | | | ಸಾ ನೂ ಹ ಒ |
|  ಸಾವಿರ ಐದು | | | | ಸಾ ನೂ ಹ ಒ |
|  ಸಾವಿರ ಒಂಬತ್ತು | | | | ಸಾ ನೂ ಹ ಒ |
|  ಸಾವಿರ ಏಳು | | | | ಸಾ ನೂ ಹ ಒ |
|  ಸಾವಿರ ಎಂಟು | | | | ಸಾ ನೂ ಹ ಒ |
|  ಸಾವಿರ ಹತ್ತು | | | | ಸಾ ನೂ ಹ ಒ |

*ಸಾ- ಸಾವಿರ, ನೂ- ನೂರು, ಹ- ಹತ್ತು, ಒ- ಒಂದು*

## ಸಾವಿರದೊಂದಿಗೆ ಸೇರುವಾಗ

| | | | |
|---|---|---|---|
| 1000 + 100 | 1000<br>100 | 1100 | ಸಾವಿರದ ನೂರು |
| 1000 + 10 | 1000<br>10 | 1010 | ಸಾವಿರದ ಹತ್ತು |

| | | | |
|---|---|---|---|
| 2000 + 200 | | | |
| 3000 + 40 | | | |
| 3000 + 5 | | | |

| | | | |
|---|---|---|---|
| 1000 + 300 + 30 | | | ಸಾವಿರದ ಮುನ್ನೂರ ಮೂವತ್ತು |
| 5000 + 30 + 3 | | | |
| 8000 + 300 + 3 | | | |
| 6000 + 700 + 40 + 8 | | | |

1000 ದಿಂದ 1200 ರ ವರೆಗೆ ಎಷ್ಟು ಸಂಖ್ಯೆಗಳಿವೆ?

## ಅಂಕೆಗಳಲ್ಲಿಯೂ ಅಕ್ಷರಗಳಲ್ಲಿಯೂ ಬರೆಯಿರಿ...

| ಅಂಕೆಗಳಲ್ಲಿ | ಅಕ್ಷರಗಳಲ್ಲಿ |
|---|---|
| 5250 | |
| | ಏಳು ಸಾವಿರದ ಏಳುನೂರ ಏಳು |
| 9018 | |
| | ಒಂಬತ್ತು ಸಾವಿರದ ಒಂಬತ್ತು |

## ಸಂಖ್ಯಾ ಕಾರ್ಡುಗಳು

ಸಂಖ್ಯಾ ಕಾರ್ಡುಗಳನ್ನು ನೋಡಿರಿ. ಅವುಗಳನ್ನು ಉಪಯೋಗಿಸಿ ಮಾಡಬಹುದಾದ ನಾಲ್ಕಂಕೆ ಸಂಖ್ಯೆಗಳನ್ನು ಬರೆಯಿರಿ...

**3** **5** **8** **1**

5 ರಿಂದ ಆರಂಭವಾಗುವ ಎಷ್ಟು ಸಂಖ್ಯೆಗಳಿವೆ? ______________

ಹತ್ತುಗಳ ಸ್ಥಾನದಲ್ಲಿ 8 ಬರುವ ಎಷ್ಟು ಸಂಖ್ಯೆಗಳಿವೆ? ______________

ಸಂಖ್ಯೆಗಳನ್ನು ಸಣ್ಣದರಿಂದ ದೊಡ್ಡದರವರೆಗೆ ಎಂಬ ಕ್ರಮದಲ್ಲಿ ನೋಟು ಪುಸ್ತಕದಲ್ಲಿ ಬರೆಯಿರಿ.

## ಸಂಖ್ಯೆಯನ್ನು ಓದಬಹುದೇ?

ಸ್ಪರ್ಧೆಯಲ್ಲಿ ಭಾಗವಹಿಸಲಿರುವ ಸ್ಪೀಡೀ ಕಾರಿನ ರಿಜಿಸ್ಟ್ರೇಷನ್ ನಂಬರ್ ಕೆಸರು ಮಣ್ಣು ಬಿದ್ದು ಮರೆಯಾಗಿದೆ.

ಈಗ ಕಾಣುವ ಸಂಖ್ಯೆ

ಸ್ವಲ್ಪ ಭಾಗವನ್ನು ಶುಚಿಗೊಳಿಸಿದಾಗ

ಇನ್ನೂ ಸ್ವಲ್ಪ ಭಾಗವನ್ನು ಶುಚಿಗೊಳಿಸಿದಾಗ

ಬಹುತೇಕ ಭಾಗವನ್ನು ಶುಚಿಗೊಳಿಸಿದಾಗ




**ಎಷ್ಟು ಸುಂದರ!**

9 + 1 = 10

99 + 1 = ...............

999 + 1 = ...............

9999 + 1 = ...............

## ಮಡ್ ರೇಸ್

ಗೆಳೆಯರೊಂದಿಗೆ ಮಡ್ ರೇಸ್ ಆಡಿರಿ... 100, 200, ..., 600 ರ ವರೆಗೆ ಬರೆದ ದಾಳ ಉಪಯೋಗಿಸಿ ಆಡಿರಿ. ದಾಳವನ್ನು ಹಾಕಿದಾಗ ಮೇಲ್ಭಾಗದಲ್ಲಿ ಕಾಣುವ ಸಂಖ್ಯೆಗೆ ಅನುಸರಿಸಿ ಕಾರನ್ನು ಚಲಾಯಿಸಿರಿ. ಸೇತುವೆ ಬಂದರೆ ಅದರಲ್ಲಿ ಹತ್ತಿ ಮುಂದಕ್ಕೆ ಹೋಗಬಹುದು ಹಾಗೂ ಗುಂಡಿಯಲ್ಲಿ ಬಿದ್ದರೆ ಹಿಂದಕ್ಕೆ ತಲುಪಬಹುದು. ಮೊದಲು 11000 ಕ್ಕೆ ತಲುಪುವವರು ಗೆಲ್ಲುವರು.









## ಬಹುಮಾನ



ಕಾರು ಓಟ ಸ್ಪರ್ಧೆಯಲ್ಲಿ ವಿಜಯಿಯಾದ ಟೋಟೋಗೆ ಟ್ರೋಫಿ ಜೊತೆಗೆ ನಗದು ಬಹುಮಾನವೂ ಇದೆ. ಬಹುಮಾನವನ್ನು ಚೆಕ್ ರೂಪದಲ್ಲಿ ಕೊಟ್ಟರು. ಚೆಕ್‌ನಲ್ಲಿ ಮೊತ್ತವನ್ನು ಅಂಕೆಗಳಲ್ಲಿ ಬರೆಯಿರಿ.

ತಿರುವನಂತಪುರಂ ಶಾಖೆ
ತಿರುವನಂತಪುರ 695001
ಐ.ಎಫ್.ಎಸ್ ಕೋಡ್ - KSC0001234

0 8 | 0 7 | 2 0 2 5
ದಿವಸ | ತಿಂಗಳು | ವರ್ಷ

ಹಣ ಪಾವತಿಸಬೇಕಾದ ವ್ಯಕ್ತಿಯ ಹೆಸರು ___ಟೋಟೋ___

ಮೊತ್ತ ___ಒಂಬತ್ತು ಸಾವಿರದ ಒಂಬೈನೂರ ತೊಂಬತ್ತೊಂಬತ್ತು___ ರೂಪಾಯಿಗಳು ಮಾತ್ರ

₹ ................

ಖಾತೆ ನಂಬರ್ KSC 0000320237

ಇದರಲ್ಲಿ ನಮೂದಿಸಿದ ದಿನಾಂಕದಿಂದ ಮೂರು ತಿಂಗಳವರೆಗೆ ಈ ಚೆಕ್‌ನ ಕಾಲಾವಧಿ ಇರುತ್ತದೆ.

ಇಲ್ಲಿ ಸಹಿ ಹಾಕಿರಿ

⑈322401⑈ 673009032⑆ 000611⑈ 31

## ಸಂಚರಿಸಿದ ದೂರ



ಪ್ರತಿಯೊಂದು ಕಾರು ಸಂಚರಿಸಿದ ಒಟ್ಟು ದೂರವನ್ನು ಕೆಳಗೆ ಕೊಡಲಾಗಿದೆ.

| ನಂಬರು | ಕಾರು | ದೂರ (ಕಿಲೋಮೀಟರ್‌ನಲ್ಲಿ) |
|---|---|---|
| 1 | ಮಿಕ್ಕಿ | 8546 |
| 2 | ಬೋನಿ | 7982 |
| 3 | ಸ್ಪೀಡೀ | 6375 |

| ನಂಬರು | ಕಾರು | ದೂರ (ಕಿಲೋಮೀಟರ್‌ನಲ್ಲಿ) |
|---|---|---|
| 4 | ಫ್ರೆಡೀ | 5114 |
| 5 | ಫ್ಲೋರ | 6735 |
| 6 | ಟೋಟೋ | 8564 |

ಸಂಚರಿಸಿದ ದೂರಕ್ಕೆ ಅನುಸರಿಸಿ ಪಟ್ಟಿಯಲ್ಲಿ ಬರೆಯಿರಿ. ಹೆಚ್ಚು ದೂರ ಸಂಚರಿಸಿದ ವಾಹನ ಮೊದಲೂ ಮತ್ತು ಕಡಿಮೆ ದೂರ ಸಂಚರಿಸಿದ ವಾಹನ ಕೊನೆಗೂ ಬರುವ ರೀತಿಯಲ್ಲಿ ಕ್ರಮೀಕರಿಸಿ ಬರೆಯಿರಿ.

| ನಂಬರು | ಕಾರಿನ ಹೆಸರು | ದೂರ (ಕಿಲೋಮೀಟರ್‌ನಲ್ಲಿ) | |
|---|---|---|---|
| | | ಅಂಕೆಗಳಲ್ಲಿ | ಅಕ್ಷರದಲ್ಲಿ |
| | | | |
| | | | |
| | | | |
| | | | |
| | | | |
| | | | |

## ಬಗ್ಗಿ ಕಾರಿನ ನಂಬರ್

ಅಬಾಕಸ್‌ನ ಸಾವಿರಗಳ ಸ್ಥಾನದಿಂದ 1 ಮಣಿಯನ್ನು ತೆಗೆದು ಒಂದುಗಳ ಸ್ಥಾನಕ್ಕೆ ಹಾಕಿರಿ. ಈಗ ಸಿಕ್ಕಿದ ಸಂಖ್ಯೆ ಯಾವುದು?

ಸಾವಿರ
ಕಡಿಮೆಯಾಯಿತು
ಒಂದು ಹೆಚ್ಚಾಯಿತು

________________

ಅಬಾಕಸ್‌ನಲ್ಲಿ ಮೊದಲು ಇದ್ದ ಸಂಖ್ಯೆ ಮತ್ತು ಈಗ ಸಿಕ್ಕಿದ ಸಂಖ್ಯೆಗಳೊಳಗಿನ ವ್ಯತ್ಯಾಸವಾಗಿದೆ ಬಗ್ಗಿ ಕಾರಿನ ನಂಬರು.

ಆ ನಂಬರ್ ಯಾವುದು ? ________________




## ಇನ್ನೂ ಒಂದು ಸೇರಿದರೆ




ಅಬಾಕಸ್‌ನಲ್ಲಿರುವ ಸಂಖ್ಯೆ ಯಾವುದು? ________

ಇದರೊಂದಿಗೆ ಇನ್ನೂ ಒಂದನ್ನು ಸೇರಿಸಿದರೆ ಸಿಗುವ ಸಂಖ್ಯೆ ಯಾವುದು? ________

## ಟೋಮೋ ಕಾರು ಗ್ಯಾರೇಜ್‌ನಲ್ಲಿ

- ಕಾರು ಓಟ ಸ್ಪರ್ಧೆಯ ನಂತರ ರಿಪೇರಿ ಕೆಲಸಗಳಿಗಾಗಿ ಟೋಮೋ ಕಾರನ್ನು ಗ್ಯಾರೇಜ್‌ಗೆ ಕೊಂಡು ಹೋಗಲಾಯಿತು. ಬ್ಯಾಟರಿ ಬದಲಿಸುವುದಕ್ಕಾಗಿ 3500 ರೂಪಾಯಿ, ಎಂಜಿನ್ ಕೆಲಸಗಳಿಗಾಗಿ 2500 ರೂಪಾಯಿ, ಪೈಂಟಿಂಗ್‌ಗೆ 4000 ರೂಪಾಯಿ ಖರ್ಚಾಯಿತು. ಒಟ್ಟು ಎಷ್ಟು ರೂಪಾಯಿ ಖರ್ಚಾಯಿತು?



| ಪ್ರಶ್ನೆ ಓದಿ ನಾನು ಅರ್ಥೈಸಿದ ವಿಚಾರಗಳು |
|---|
| |

ಒಟ್ಟು ಖರ್ಚಾದ ಹಣ ________________

## ಪ್ರವಾಸ ಹೋಗುವ

ಟೋಟೋ ಕಾರು ಒಂದು ದೇಶೀಯ ಪ್ರವಾಸಕ್ಕಿರುವ ತಯಾರಿಯಲ್ಲಿದೆ. ಅದಕ್ಕಾಗಿ 4 ಚಕ್ರಗಳನ್ನು ಬದಲಿಸಬೇಕು. ಒಂದು ಚಕ್ರಕ್ಕೆ 2500 ರೂಪಾಯಿಗಳು. ಒಟ್ಟು ಎಷ್ಟು ರೂಪಾಯಿಗಳು ಬೇಕು?

- ದೇಶೀಯ ಪ್ರವಾಸ ಹೋದ ಸಂದರ್ಭದಲ್ಲಿ ಬೋಣಿ ಎಲೆಕ್ಟ್ರಿಕ್ ಕಾರನ್ನು ಚಾರ್ಜ್ ಮಾಡಲು ಕೊಟ್ಟ ಮೊತ್ತವನ್ನು ಕೆಳಗೆ ಕೊಡಲಾಗಿದೆ. ಕಾರು ಚಾರ್ಜ್ ಮಾಡಲು ಖರ್ಚಾದ ಮೊತ್ತವನ್ನು ಕಂಡುಹಿಡಿಯಿರಿ.

| 1 | 2 | 3 |
|---|---|---|
| **3500 ರೂಪಾಯಿ** | **2000 ರೂಪಾಯಿ** | **3000 ರೂಪಾಯಿ** |

**ನಾನು ಲೆಕ್ಕ ಮಾಡಿದ ರೀತಿ**

## ನಮೂನೆ ಮುಂದುವರಿಸಿರಿ.

1. 500, 1000, 1500, .........., .........., .........., .........., .........., ..........
2. 4000, 6000, 8000, .........., .........., .........., .........., .........., ..........
3. 7628, 7728, 7828, .........., .........., .........., .........., .........., ..........
4. 2222, 3333, 4444, .........., .........., .........., .........., .........., ..........
5. 9400, 9300, 9200, .........., .........., .........., .........., .........., ..........
6. 3021, 4132, 5243, .........., .........., .........., .........., .........., ..........

## ನಾನು ಮಾಡಿದ ನಮೂನೆಗಳು

- ............, ............, ............ ............ ............
- ............, ............, ............ ............ ............
- ............, ............, ............ ............ ............
- ............, ............, ............ ............ ............

1. ಕಾರು ಓಟ ಸ್ಪರ್ಧೆಯಲ್ಲಿ ಭಾಗವಹಿಸಿದ ಕಾರುಗಳಿಗೆ ಸಂಘಟಕ ಸಮಿತಿಯವರು ರಿಜಿಸ್ಟ್ರೇಷನ್ ನಂಬರ್‌ಗಳನ್ನು ನೀಡಿದ್ದರು. 5000 ಆರಂಭಿಸಿ 5050 ರವರೆಗಿರುವ ನಂಬರ್‌ಗಳನ್ನು ನೀಡಲಾಗಿತ್ತು. ಹಾಗಾದರೆ ಸ್ಪರ್ಧೆಯಲ್ಲಿ ಭಾಗವಹಿಸಿದ ಕಾರುಗಳ ಸಂಖ್ಯೆ ಎಷ್ಟು?
2. 5, 4, 0, 7 ಎಂಬೀ ಎಲ್ಲಾ ಅಂಕೆಗಳನ್ನು ಉಪಯೋಗಿಸಿ ನಾಲ್ಕಂಕೆ ಸಂಖ್ಯೆಗಳನ್ನು ಬರೆಯಿರಿ. ಎಷ್ಟು ಸಂಖ್ಯೆಗಳನ್ನು ಬರೆಯಲು ಸಾಧ್ಯವಾಯಿತು? ಅತಿ ದೊಡ್ಡ ನಾಲ್ಕಂಕೆ ಸಂಖ್ಯೆಯನ್ನು ಅಬಾಕಸ್‌ನಲ್ಲಿ ಚಿತ್ರಿಸಿರಿ. ಈ ಸಂಖ್ಯೆಯನ್ನು ಅಕ್ಷರಗಳಲ್ಲಿ ಬರೆಯಿರಿ.
3. 9999 ಮತ್ತು 10100 ರ ಎಡೆಯಲ್ಲಿರುವ ಸಂಖ್ಯೆಗಳಲ್ಲಿ ಒಂದುಗಳ ಸ್ಥಾನದಲ್ಲಿ ಸೊನ್ನೆ ಬರುವ ಎಲ್ಲಾ ಸಂಖ್ಯೆಗಳನ್ನು ಬರೆಯಿರಿ.
4. ನಮೂನೆ ಪೂರ್ತಿಗೊಳಿಸಿರಿ.

   (A) 10150, 10200, 10250, .........., .........., .........., .........., ..........

   (B) 1500, 2600, 3700, .........., .........., .........., .........., ..........

   (C) 14500, 15250, 16000, .........., .........., .........., .........., ..........

5. ನಾನು ಯಾರು?
   - 4000 ಮತ್ತು 5000 ಎಡೆಯಲ್ಲಿರುವ ಸಂಖ್ಯೆಯಾಗಿದೆ.
   - ಒಂದುಗಳ ಸ್ಥಾನದ ಅಂಕೆಯು ಸಾವಿರಗಳ ಸ್ಥಾನದ ಅಂಕೆಯ ಇಮ್ಮಡಿಯಾಗಿದೆ.
   - ಸಾವಿರದ ಸ್ಥಾನದ ಅಂಕೆಯ ಅರ್ಧವಾಗಿದೆ ಹತ್ತುಗಳ ಸ್ಥಾನದ ಅಂಕೆ.
   - ಅಂಕೆಗಳ ಮೊತ್ತ 19 ಆಗಿದೆ. ಸಂಖ್ಯೆ ಯಾವುದು?

6. ಸಂಖ್ಯೆ ಕಂಡುಹಿಡಿಯಿರಿ.

- 9999 ಎಂಬ ಸಂಖ್ಯೆಯಿಂದ 1000 ದಂತೆ ಕಳೆಯುತ್ತಾ ಬಂದರೆ 8-ನೆಯ ಸಂಖ್ಯೆ ಯಾವುದು?
- 100 ರಂತೆ ಕಡಿಮೆಯಾಗುವುದಾದರೆ 5-ನೆಯ ಸಂಖ್ಯೆ ಯಾವುದು?

ಇದೇ ರೀತಿಯ ಒಂದು ಪ್ರಶ್ನೆಯನ್ನು ತಯಾರಿಸಿ ಗೆಳೆಯರೊಂದಿಗೆ ಹಂಚಿಕೊಳ್ಳಿರಿ.

7. 1000 ದಿಂದ 1100 ರ ಎಡೆಯಲ್ಲಿ ಸೊನ್ನೆಯಲ್ಲಿ ಕೊನೆಗೊಳ್ಳುವ ಎಷ್ಟು ಸಂಖ್ಯೆಗಳಿವೆ?

8. 1 ರಿಂದ 50 ರ ವರೆಗೆ ಬರೆಯುವಾಗ ಎಷ್ಟು ಸಲ 2 ನ್ನು ಬರೆಯಬೇಕು?

- 100 ರ ವರೆಗೆ ಬರೆಯುವುದಾದರೇ?
- 2 ರ ಬದಲು 3 ಆದರೆ ಅಷ್ಟೇ ಸಂಖ್ಯೆ ಸಿಗುವುದೇ?

## ಅನ್ವೇಷಣೆ

- 1, 2 ಎಂಬೀ ಅಂಕೆಗಳನ್ನು ಉಪಯೋಗಿಸಿ (ಅಂಕೆಗಳು ಆವರ್ತಿಸದೆ) ಬರೆಯಬಹುದಾದ ಎಲ್ಲಾ ಎರಡಂಕೆ ಸಂಖ್ಯೆಗಳನ್ನು ಬರೆಯಿರಿ. ಎಷ್ಟು ಸಂಖ್ಯೆಗಳಿವೆ ಎಂದು ಬರೆಯಿರಿ.
- 1, 2, 3 ಎಂಬೀ ಅಂಕೆಗಳನ್ನು ಉಪಯೋಗಿಸಿ (ಅಂಕೆಗಳು ಆವರ್ತಿಸದೆ) ಬರೆಯಬಹುದಾದ ಎಲ್ಲಾ ಮೂರಂಕೆ ಸಂಖ್ಯೆಗಳನ್ನು ಬರೆಯಿರಿ. ಎಷ್ಟು ಸಂಖ್ಯೆಗಳಿವೆ ಎಂದು ಬರೆಯಿರಿ.
- 1, 2, 3, 4 ಎಂಬೀ ಅಂಕೆಗಳನ್ನು ಉಪಯೋಗಿಸಿ (ಅಂಕೆಗಳು ಆವರ್ತಿಸದೆ) ಬರೆಯಬಹುದಾದ ಎಲ್ಲಾ ನಾಲ್ಕಂಕೆ ಸಂಖ್ಯೆಗಳನ್ನು ಬರೆಯಿರಿ. ಎಷ್ಟು ಸಂಖ್ಯೆಗಳಿವೆ ಎಂದು ಬರೆಯಿರಿ.
- ಕಂಡುಹಿಡಿದ ವಿಚಾರಗಳನ್ನು ನೋಟು ಪುಸ್ತಕದಲ್ಲಿ ಬರೆಯಿರಿ...

# 3

# ಅದೆಷ್ಟು ಸಂಖ್ಯೆಗಳು



ಮಿತ್ರ ಮತ್ತು ಗೆಳೆಯರು ಎರ್ನಾಕುಳಂಗೆ ಪ್ರವಾಸ ಹೋಗಲು
ತಯಾರಾಗಿದ್ದಾರೆ.
ಪ್ರಯಾಣ ರೈಲಿನಲ್ಲಿ.

## ರೈಲು ನಿಲ್ದಾಣದಲ್ಲಿ...

ರೈಲು ಪ್ರಯಾಣಕ್ಕಾಗಿ ಟಿಕೆಟ್ ತೆಗೆಯಲು ಕೊಟ್ಟ ನೋಟುಗಳು ಮತ್ತು ನಾಣ್ಯಗಳನ್ನು ನೋಡಿರಿ.

ಒಟ್ಟು ಎಷ್ಟು ರೂಪಾಯಿಗಳನ್ನು ಕೊಟ್ಟರು?











ಒಟ್ಟು ರೂಪಾಯಿಗಳು

## ಪ್ರವಾಸಿ ಕೇಂದ್ರಗಳ ಕಡೆಗೆ

ರೈಲು ನಿಲ್ದಾಣದಲ್ಲಿರುವ ಒಂದು ಬೋರ್ಡ್‌ನ್ನು ನೋಡಿರಿ. ಇದರಲ್ಲಿ ಎರ್ನಾಕುಳಂನಿಂದ ಭಾರತದ ವಿವಿಧ ಪ್ರವಾಸಿ ಕೇಂದ್ರಗಳಿಗಿರುವ ದೂರವನ್ನು ನೀಡಲಾಗಿದೆ.

| ಸ್ಥಳ | ದೂರ |
|---|---|
| ಹಿಲ್ ಪ್ಯಾಲೇಸ್ | 11 ಕಿ.ಮೀ. |
| ಗೋವಾ | 744 ಕಿ.ಮೀ. |
| ಮೈಸೂರು | 385 ಕಿ.ಮೀ. |
| ಕನ್ಯಾಕುಮಾರಿ | 307 ಕಿ.ಮೀ. |
| ಹೈದರಾಬಾದ್ ಫಿಲಂ ಸಿಟಿ | 1112 ಕಿ.ಮೀ. |
| ಕೆಂಪುಕೋಟೆ | 2592 ಕಿ.ಮೀ. |
| ತಾಜ್ ಮಹಲ್ | 2424 ಕಿ.ಮೀ. |



ಅತಿ ದೂರದಲ್ಲಿರುವ ಪ್ರವಾಸಿ ಕೇಂದ್ರ ಯಾವುದು? ______________

ಅತಿ ಹತ್ತಿರದಲ್ಲಿರುವುದೋ? ______________

ಹೆಚ್ಚು ದೂರದಿಂದ ಕಡಿಮೆ ದೂರದವರೆಗೆ ಎಂಬ ಕ್ರಮದಲ್ಲಿ ಬರೆಯಿರಿ.

| ಸ್ಥಳ | ದೂರ |
|---|---|
| | |
| | |
| | |
| | |
| | |
| | |
| | |

## ಅರಮನೆಯಲ್ಲಿ




ಮಕ್ಕಳು ಅರಮನೆಯನ್ನು ಪ್ರವೇಶಿಸುವುದಕ್ಕಾಗಿ ಸಾಲಾಗಿ ನಿಂತಿದ್ದಾರೆ. ಅವರ ಟಿಕೇಟುಗಳಲ್ಲಿ ಕ್ರಮವಾದ ನಂಬರ್‌ಗಳಿವೆ. ಒಂದನೆಯವಳಾಗಿ ನಿಂತಿರುವ ಮಿತ್ರಳ ನಂಬರ್ 2986. ಸಾಂದ್ರಳ ನಂಬರ್ 3010.

- ಮಿತ್ರಳಿಂದ ಆರಂಭಿಸಿ ಸಾಂದ್ರಳವರೆಗೆ ಸಾಲಿನಲ್ಲಿ ಎಷ್ಟು ಮಕ್ಕಳಿದ್ದಾರೆ? ____________
- ಸಾಂದ್ರಳ ಮುಂದೆ ನಿಂತಿರುವ ಇಶಾನ್‌ನ ನಂಬರ್ ಯಾವುದು? ____________
- 3010 ರ ಮುಂದೆಯೂ ಹಿಂದೆಯೂ ಇರುವವರ ನಂಬರನ್ನು ಬರೆಯಿರಿ.

  ____________
- 3010 ರ ಹಿಂದಿನ ನಂಬರ್‌ನಿಂದ ಆರಂಭಿಸಿ 20 ನೆಯ ಟಿಕೇಟ್ ನಂಬರ್ ಯಾವುದು?

  ____________
- ಸಾಲಿನಲ್ಲಿ 15 ನೆಯದಾಗಿ ನಿಂತಿರುವ ಮಂಜುವಿನ ನಂಬರ್ ಬರೆಯಿರಿ.
- 2986 ರಿಂದ 3010 ರ ವರೆಗಿರುವ ನಂಬರುಗಳನ್ನು ಕ್ರಮವಾಗಿ ಬರೆಯಿರಿ.____________

## ವಾಟರ್ ಮೆಟ್ರೋ

ಅರಮನೆ ನೋಡಿದ ನಂತರ ಮಕ್ಕಳು ವಾಟರ್ ಮೆಟ್ರೋಗೆ ಹತ್ತಿದರು.



ವಾಟರ್ ಮೆಟ್ರೋಗೆ ಹತ್ತಿದವರಿಗೆ ಊಟದ ಕೂಪನ್ ಸಿಕ್ಕಿತು. ಮಿತ್ರಳ ಗುಂಪಿಗೆ 8000 ದಿಂದ 9000 ದ ಎಡೆಯಲ್ಲಿರುವ ನಂಬರ್‌ಗಳು ಸಿಕ್ಕಿದವು. ಅವುಗಳ ಅಂಕೆಗಳ ಮೊತ್ತ 10 ಆಗಿರುತ್ತದೆ. ಮಿತ್ರಳಿಗೆ ಮತ್ತು ಗೆಳೆಯರಿಗೆ ಸಿಕ್ಕಿದ ಕೂಪನ್ ನಂಬರ್‌ಗಳು ಯಾವುದಾಗಿರಬಹುದೆಂದು ಬರೆಯಿರಿ.

| | | |
|---|---|---|
| | | |
| | | |

### ಅಂಕೆಗಳ ಮೊತ್ತ

7000 ದಿಂದ 8000 ದ ಎಡೆಯಲ್ಲಿ ಅಂಕೆಗಳ ಮೊತ್ತ 10 ಆಗಿರುವ ಎಷ್ಟು ಸಂಖ್ಯೆಗಳಿವೆ? ನೋಟು ಪುಸ್ತಕದಲ್ಲಿ ಬರೆಯಿರಿ.

### ಪಝುಲ್ ಕಾರ್ನರ್

AAB +
A
BCCC

A = .............

B = .............

C = .............

## ಪ್ರದರ್ಶನ ನಗರದ ಕಡೆಗೆ



ಮಕ್ಕಳ ಪಾರ್ಕಿನ ಪ್ರದರ್ಶನವನ್ನು ಕಾಣಲು ಬರುವವರಿಗೆ ಬಹುಮಾನ ಕೂಪನ್ ಸಿಗುತ್ತದೆ. ಅದೃಷ್ಟ ಚೀಟಿ ತೆಗೆಯುವ ಮೂಲಕ ಬಹುಮಾನವನ್ನು ನೀಡಲಾಗುತ್ತದೆ.

ಮಕ್ಕಳೆಲ್ಲರೂ ಬಹುಮಾನ ಕೂಪನಿನೊಂದಿಗೆ ಸ್ಕ್ರೀನಿನ ಮುಂದೆ ನಂಬರ್ ಪ್ರತ್ಯಕ್ಷವಾಗುವುದನ್ನು ನೋಡುತ್ತಾ ನಿಂತರು.

ಪ್ರತಿಯೊಂದು ಸ್ಥಾನವು ತಿರುಗಿ ಬಂದು ಸ್ಕ್ರೀನ್‌ನಲ್ಲಿ ಪ್ರತ್ಯಕ್ಷವಾಗುವ ಸಂಖ್ಯೆಯನ್ನು ಬರೆಯಿರಿ.

| | | |
|---|---|---|
|  | 10000 | ಹತ್ತುಸಾವಿರ |
|  | 11000 | .................. |
|  | .................. | .................. |
|  | .................. | .................. |

**ಅಂಕೆಗಳ ಮೊತ್ತ 5 ಆದರೆ ಬಹುಮಾನ**

ಬಹುಮಾನ ಸಿಕ್ಕಿದ ನಂಬರ್

______________

## ಎಷ್ಟು ನಾಲ್ಕಂಕೆ ಸಂಖ್ಯೆಗಳು

9, 0 ಎಂಬ ಅಂಕೆಗಳನ್ನು ಮಾತ್ರ ಉಪಯೋಗಿಸಿ ಎಷ್ಟು ನಾಲ್ಕಂಕೆ ಸಂಖ್ಯೆಗಳನ್ನು ಮಾಡಬಹುದು? ಅವು ಯಾವುವು?




ಅವುಗಳನ್ನು ದೊಡ್ಡದರಿಂದ ಸಣ್ಣದರವರೆಗೆ ಕ್ರಮೀಕರಿಸಿ ಬರೆಯಿರಿ.

## ಸಂಖ್ಯೆಗಳು

ಮೊದಲಿನ ಸಂಖ್ಯೆಯಂತೆ ಇತರ ಸಂಖ್ಯೆಗಳನ್ನು ಬರೆಯಿರಿ...

- 5 ಸಾವಿರ 4 ನೂರು 3 ಹತ್ತು 2 ಒಂದು - 5432

  54 ನೂರು 32 ಒಂದು - .................

  543 ಹತ್ತು 2 ಒಂದು - .................

  5432 ಒಂದು - .................

- 82 ನೂರು - .................

  820 ಹತ್ತು - .................

  8200 ಒಂದು - .................

7104
- ........ ಸಾವಿರ ........ ನೂರು ........ ಹತ್ತು ........ ಒಂದು
- ........ ನೂರು ........ ಒಂದು
- ........ ಸಾವಿರ ....... ಒಂದು
- ........ ಸಾವಿರ ........ ಹತ್ತು ........ ಒಂದು

## ಸಂಖ್ಯಾ ಚಕ್ರ

ಚಕ್ರ ಪೂರ್ತಿಗೊಳಿಸಿರಿ.



## ಬಿಡಿಸಿ ಬರೆಯುವ

ಎಷ್ಟು ಒಂದುಗಳಿವೆ?

ಎಷ್ಟು ಹತ್ತುಗಳಿವೆ?

ಎಷ್ಟು ನೂರುಗಳಿವೆ?

10000

- **ಹತ್ತು** ಸಾವಿರಗಳು
- **ಹತ್ತುಸಾವಿರ** ಒಂದುಗಳು
- **ಸಾವಿರ** ಹತ್ತುಗಳು
- **ನೂರು** ನೂರುಗಳು

ಕೆಳಗೆ ಕೊಟ್ಟಿರುವವುಗಳನ್ನೂ ಇದೇ ರೀತಿಯಲ್ಲಿ ಪೂರ್ತಿಗೊಳಿಸಿರಿ.

............... ಒಂದು

............... ಹತ್ತು

............... ನೂರು

............... ಸಾವಿರ

13000

6700

..............................

..............................

..............................

**ಪಝ್ಲ್ ಕಾರ್ನರ್**

ನಾನು ಯಾರು?

**6 ನೂರುಗಳು**

**6 ಹತ್ತುಗಳು**

**6 ಸಾವಿರಗಳು**

**6 ಒಂದುಗಳು**

### ಎರ್ನಾಕುಳಂ - ಅಮೃತ್‌ಸರ್ ಯಾತ್ರೆ

ಎರ್ನಾಕುಳಂ ನಿಂದ ಅಮೃತ್‌ಸರ್ ವರೆಗೆ ಹೋಗುವ ರೈಲು ನಿಲ್ಲುವ ಕೆಲವು ನಿಲ್ದಾಣಗಳು ಮತ್ತು ಅವುಗಳ ದೂರಗಳನ್ನು ಕೆಳಗೆ ನೀಡಲಾಗಿದೆ. ಪಟ್ಟಿಯನ್ನು ನೋಡಿ ಎರ್ನಾಕುಳಂ ನಿಂದ ಹೊರಡುವ ರೈಲು ಮೊದಲು ನಿಲ್ಲುವ ನಿಲ್ದಾಣ ಯಾವುದೆಂದು ಬರೆಯಿರಿ. ಆನಂತರ ನಿಲ್ಲುವ ಇತರ ನಿಲ್ದಾಣಗಳು ಮತ್ತು ದೂರವನ್ನು ಕ್ರಮವಾಗಿ ಬರೆಯಿರಿ.

| ನಿಲ್ದಾಣ | ದೂರ |
|---|---|
| ಕಾಸರಗೋಡು | 368 ಕಿ.ಮೀ. |
| ಮಂಗಳೂರು | 415 ಕಿ.ಮೀ. |
| ಕೋಝಿಕ್ಕೋಡು | 193 ಕಿ.ಮೀ. |
| ಅಮೃತ್ ಸರ್ | 3092 ಕಿ.ಮೀ. |
| ಸೂರತ್ | 1522 ಕಿ.ಮೀ. |
| ನವದೆಹಲಿ | 2643 ಕಿ.ಮೀ. |
| ಲುಧಿಯಾನ | 2956 ಕಿ.ಮೀ. |

| ನಿಲ್ದಾಣ | ದೂರ |
|---|---|
| | |
| | |
| | |
| | |
| | |
| | |
| | |

## ನಮೂನೆ ಮುಂದುವರಿಸಿರಿ.

- 10050, 10051, 10052, ................, ................, ................
- 11085, 11086, 11087, ................, ................, ................
- 19995, 19996, 19997, ................, ................, ................
- 12320, 12340, 12360, ................, ................, ................

**ನಾನು ಕಂಡುಕೊಂಡದ್ದು**

## ವಿಮಾನದೆಡೆಗೆ

ಮಕ್ಕಳು ಪ್ರವಾಸ ಮುಗಿಸಿ ವಿಮಾನದಲ್ಲಿ ಹಿಂತಿರುಗಲಿದ್ದಾರೆ. ವಿಮಾನ ನಿಲ್ದಾಣಕ್ಕೆ ಬರುವ ಮತ್ತು ಹೋಗುವ ವಿಮಾನಗಳ ನಂಬರ್‌ಗಳನ್ನು ಸ್ಕ್ರೀನಿನಲ್ಲಿ ಪ್ರದರ್ಶಿಸಲಾಗುತ್ತದೆ.




ವಿಮಾನದ ನಂಬರ್ ಒಂದು ನಾಲ್ಕಂಕೆ ಸಂಖ್ಯೆಯಾಗಿದೆ.

ಸಾವಿರ ಮತ್ತು ನೂರರ ಸ್ಥಾನದ ಅಂಕೆಗಳು ಸೇರಿದ ಸಂಖ್ಯೆಯ ಇಮ್ಮಡಿಯಾಗಿದೆ ನೂರರ ಮತ್ತು ಹತ್ತರ ಸ್ಥಾನದ ಅಂಕೆಗಳು ಸೇರಿದ ಸಂಖ್ಯೆ.

ನೂರರ ಮತ್ತು ಹತ್ತರ ಸ್ಥಾನದ ಅಂಕೆಗಳು ಸೇರಿದ ಸಂಖ್ಯೆಯ ಇಮ್ಮಡಿಯಾಗಿದೆ ಹತ್ತರ ಮತ್ತು ಒಂದರ ಸ್ಥಾನದ ಅಂಕೆಗಳು ಸೇರಿದ ಸಂಖ್ಯೆ.

ವಿಮಾನದ ನಂಬರ್ ಬರೆಯಿರಿ. ________________

## ರೋಮನ್ ಸಂಖ್ಯೆಗಳು

ಗಡಿಯಾರವನ್ನು ನೋಡಿರಿ.







| ರೋಮನ್ ಸಂಖ್ಯೆಗಳು | | | |
|---|---|---|---|
| I | 1 | VII | 7 |
| II | 2 | VIII | 8 |
| III | 3 | IX | 9 |
| IV | 4 | X | 10 |
| V | 5 | XI | 11 |
| VI | 6 | XII | 12 |

## ಅಬಾಕಸ್‌ನ ಸಂಖ್ಯೆಗಳು




ಅಬಾಕಸ್ ನೋಡಿರಿ.



- ಇದರಲ್ಲಿ ಎರಡು ಮಣಿಗಳನ್ನು ಮಾತ್ರ ಉಪಯೋಗಿಸಿ ಮಾಡಬಹುದಾದ ಎಲ್ಲಾ ಐದಂಕೆ ಸಂಖ್ಯೆಗಳನ್ನು ಬರೆಯಿರಿ.

## ಎಷ್ಟು ನೂರುಗಳು

- 1 ರಿಂದ 5 ರ ವರೆಗಿನ ಅಂಕೆಗಳನ್ನು ಆವರ್ತಿಸದೆ ಮಾಡಬಹುದಾದ ಅತಿ ದೊಡ್ಡ ಐದಂಕೆ ಸಂಖ್ಯೆ ಮತ್ತು ಅತಿ ಸಣ್ಣ ಐದಂಕೆ ಸಂಖ್ಯೆಯನ್ನು ಬರೆಯಿರಿ.

_______________

- ದೊಡ್ಡ ಸಂಖ್ಯೆಯಲ್ಲಿ ಎಷ್ಟು ನೂರುಗಳಿವೆ? _______________
- ಸಣ್ಣ ಸಂಖ್ಯೆಯಲ್ಲಿ ಎಷ್ಟು ನೂರುಗಳಿವೆ? _______________

1. ಪೂರ್ತಿಗೊಳಿಸಿರಿ.

- 9875 - 9 ಸಾವಿರ, ................ ನೂರು, ................ ಹತ್ತು, ................ ಒಂದು
- 6307 - ........ ಸಾವಿರ, ............... ಹತ್ತು, ............... ಒಂದು
- 4218 - ................ ನೂರು, ................ ಒಂದು
- ............... - 5 ಸಾವಿರ, 6 ನೂರು, 0 ಹತ್ತು, 8 ಒಂದು
- ............... - 8 ಸಾವಿರ, 12 ಹತ್ತು, 0 ಒಂದು
- ............... - 16 ನೂರು, 25 ಒಂದು

2. 6315 ಎಂಬ ಸಂಖ್ಯೆಯಲ್ಲಿ 6 ಎಂಬ ಅಂಕೆಯ ಸ್ಥಾನ ಬೆಲೆ 6000 ಆಗಿದೆ. ಕೆಳಗೆ ನೀಡಿರುವ ಸಂಖ್ಯೆಗಳಲ್ಲಿ 3 ಎಂಬ ಅಂಕೆಯ ಸ್ಥಾನ ಬೆಲೆ ಎಷ್ಟೆಂದು ಬರೆಯಿರಿ.

8573 ...........................    7835 ............................

3578 ............................    5379 ............................

3. ತಿರುವನಂತಪುರದಿಂದ ಎರ್ನಾಕುಳಂವರೆಗಿನ ರೈಲು ಟಿಕೆಟಿನ ದರ ಒಟ್ಟು 3625 ರೂಪಾಯಿಗಳಾಗಿವೆ. ಮಕ್ಕಳಿಗಿರುವ ರಿಯಾಯಿತಿಯನ್ನು ಕಡಿಮೆ ಮಾಡಿ 2000 ರೂಪಾಯಿಗಳನ್ನು ಮಾತ್ರ ನೀಡಲಾಯಿತು. ಮಕ್ಕಳಿಗಿರುವ ರಿಯಾಯಿತಿ ಎಷ್ಟು ರೂಪಾಯಿಗಳಾಗಿರಬಹುದು?

4. ಖಾಲಿ ಇರುವ ಕೋಣೆಗಳಲ್ಲಿ ಸಂಖ್ಯೆಗಳನ್ನು ಬರೆಯಿರಿ.




- ಸಂಖ್ಯೆಗಳು ಆವರ್ತಿಸದೆ 8 ಕ್ಕೆ ತಲುಪಿರಿ.



5. ಒಂದು ಸಾಲಿನಲ್ಲಿ 27 ಮಂದಿ ಇದ್ದಾರೆ. ಮಧ್ಯದಲ್ಲಿ ನಿಂತಿರುವ ಮಗುವಿನ ಟಿಕೆಟ್ ನಂಬರ್ 4068 ಆಗಿದೆ. ಆ ಸಾಲಿನ ಮೊದಲ ಮಗುವಿನ ಟಿಕೆಟ್ ನಂಬರ್ ಎಷ್ಟಾಗಿರಬಹುದು? ಕೊನೆಯ ಮಗುವಿನ ಟಿಕೆಟ್ ನಂಬರ್ ಎಷ್ಟಾಗಿರಬಹುದು?

6. 10 ಸಾವಿರಗಳು ಸೇರಿದ ಸಂಖ್ಯೆಯು ಎಷ್ಟು 500 ಸೇರಿದ ಸಂಖ್ಯೆಗೆ ಸಮಾನವಾಗಿದೆ?

7. ಕೆಳಗೆ ನೀಡಿರುವವುಗಳಲ್ಲಿ 50 ಒಂದು, 50 ಹತ್ತು, 50 ನೂರು ಸೇರಿದ ನಾಲ್ಕಂಕೆ ಸಂಖ್ಯೆಯಾವುದು?

   (A) 5555 (B) 5505 (C) 5550 (D) 5055

8. ನಮೂನೆ ಮುಂದುವರಿಸಿರಿ...

   4080, 4085, 4091, 4098, ............, ............, ............, ............

9. ಲೆಕ್ಕ ಮಾಡಿರಿ.

   - 9000 ಮತ್ತು 10000 ದ ಎಡೆಯಲ್ಲಿ ಎಷ್ಟು ಸಂಖ್ಯೆಗಳಿವೆ?

     9000 ಮತ್ತು 9100 ರ ಎಡೆಯಲ್ಲಿ .......... ಸಂಖ್ಯೆಗಳು

     9000 ಮತ್ತು 9500 ರ ಎಡೆಯಲ್ಲಿ .......... ಸಂಖ್ಯೆಗಳು

     9000 ಮತ್ತು 10000 ದ ಎಡೆಯಲ್ಲಿ .......... ಸಂಖ್ಯೆಗಳು

   - 9000 ಮತ್ತು 10000 ದ ಎಡೆಯಲ್ಲಿ ಎಷ್ಟು ವಿಷಮ ಸಂಖ್ಯೆಗಳಿವೆ?
   - 9000 ಮತ್ತು 10000 ದ ಎಡೆಯಲ್ಲಿ ಎಷ್ಟು ಸಮ ಸಂಖ್ಯೆಗಳಿವೆ?

### ಅನ್ವೇಷಣೆ

ಎರಡು ವಿಷಮ ಸಂಖ್ಯೆಗಳನ್ನು ಬರೆದು ಕೂಡಿಸಿ ನೋಡಿರಿ.

ಸಿಗುವ ಉತ್ತರ ವಿಷಮ ಸಂಖ್ಯೆಯಾಗಿದೆಯೇ? ಸಮ ಸಂಖ್ಯೆಯಾಗಿದೆಯೇ?

ಮೂರು ವಿಷಮ ಸಂಖ್ಯೆಗಳನ್ನು ಕೂಡಿಸಿದರೋ?

ಕೂಡಿಸುವ ಸಂಖ್ಯೆಗಳ ಸಂಖ್ಯೆಯು ವಿಷಮ ಸಂಖ್ಯೆಯಾದರೆ ಮೊತ್ತ ಯಾವ ರೀತಿಯ ಸಂಖ್ಯೆ ಆಗಿರುತ್ತದೆ?

ಕೂಡಿಸುವ ಸಂಖ್ಯೆಗಳ ಸಂಖ್ಯೆಯು ಸಮಸಂಖ್ಯೆಯಾಗುವಾಗಲೋ?

ಇದೇ ರೀತಿ ಸಮಸಂಖ್ಯೆಗಳನ್ನು ಕೂಡಿಸಿ ನೋಡಿರಿ.

ಕಂಡುಹಿಡಿದ ವಿಚಾರಗಳನ್ನು ನೋಟು ಪುಸ್ತಕದಲ್ಲಿ ಬರೆಯಿರಿ.

# 4
# ಹೆಚ್ಚಾಗುವ ಗುಂಪು



## ಬಾಗಿಲು ತೆರೆಯುವ

ಧ್ವನಿ ತನ್ನ ಅಪ್ಪ ಮತ್ತು ಅಮ್ಮನ ಜೊತೆಯಲ್ಲಿ ಗಿಚ್ಚೋ ಪಾರ್ಕಿಗೆ ತಲುಪಿದಳು. ತಮ್ಮ ಧನುವೂ ಅವರ ಜೊತೆಗಿದ್ದನು.






## ಸಂಖ್ಯಾಜೋಡಿಗಳು

ಸಂಖ್ಯಾಜೋಡಿಗಳನ್ನು ಬರೆಯಬಹುದೇ.




## ಮೊತ್ತ ಸಾವಿರ

ಮೊತ್ತ ಸಾವಿರ ಆಗುವ ರೀತಿಯಲ್ಲಿ ಪೂರ್ತಿ ಮಾಡಿರಿ.

490 + 10 + 500 = 1000
490 + ........... = 1000

793 + 7 + .......... = 1000
793 + .......... = 1000

551 + 9 + .......... = 1000
551 + .......... = 1000

800 + 100 + 100 = 1000
700 + 200 + 100 = ..........
600 + 300 + 100 = ..........
500 + 400 + ....... = 1000
400 + 300 + ....... = 1000
600 + ...... + ....... = 1000
400 + ...... + ....... = 1000
500 + .......+ ....... = 1000

## ಸಂಖ್ಯಾ ಮಾಲೆಯನ್ನು ಪೂರ್ತಿ ಮಾಡಿರಿ.



## ಶೂಟಿಂಗ್ ಕಾರ್ನರ್

ಶೂಟಿಂಗ್‌ನಲ್ಲಿ ಭಾಗವಹಿಸಿ ಪಡೆದ ಅಂಕಗಳನ್ನು ಲೆಕ್ಕ ಹಾಕಿ ವಿಜಯಿಯನ್ನು ಕಂಡುಕೊಳ್ಳಿರಿ.



ಒಬ್ಬರಿಗೆ ಮೂರು ಸಲ ಶೂಟ್ ಮಾಡಬಹುದು.






ಪ್ರತಿಯೊಬ್ಬರಿಗೂ ಲಭಿಸಿದ ಅಂಕ ಎಷ್ಟೆಂದು ಬರೆಯಿರಿ.

ಧನು : 100 + 900 + 525 = ________

ಧ್ವನಿ : 750 + 250 + ........ = 1475

ಮಿನಿ ಮೂರು ಸಲ ಶೂಟ್ ಮಾಡಿದಾಗ ಲಭಿಸಿದ ಅಂಕ 1363 ಆಗಿದೆ. ಯಾವೆಲ್ಲಾ ಸಂಖ್ಯೆಗಳಿಗೆ ಶೂಟ್ ಮಾಡಿರಬಹುದು?

| 363 | | |
|---|---|---|

ಸುಹೈಲ್ ಮೂರು ಸಲವೂ 363 ರ ಮೇಲೆ ಶೂಟ್ ಮಾಡಿದನು.
ಅವನಿಗೆ ಸಿಕ್ಕಿದ ಅಂಕ ಎಷ್ಟು? ________

363 ನ್ನು ಮೂರು ಸಲ ಕೂಡಿಸಬೇಕು.

300, 60 ಮತ್ತು 3 ನ್ನು ಮೂರು ಸಲ ಕೂಡಿಸಿದರೆ ಸಾಕಲ್ಲವೇ?



3 ರ ಇಮ್ಮಡಿ 6
3 ರ ಎರಡು ಮಡಿ 6

### ಪಝಿಲ್ ಕಾರ್ನರ್

**ನಾನು ಯಾರು?**

ನಾನು ಒಂದು ಮೂರಂಕೆ ಸಂಖ್ಯೆಯಾಗಿರುವೆನು. ಎಲ್ಲಾ ಒಂದೇ ಅಂಕೆಗಳಾಗಿವೆ. ಸಂಖ್ಯೆಯನ್ನು 3 ಸಲ ಕೂಡಿಸಿ ಅದಕ್ಕೆ 1 ಸೇರಿಸಿದಾಗ ನಾಲ್ಕಂಕೆಯ ಅತ್ಯಂತ ಸಣ್ಣ ಸಂಖ್ಯೆಯು ಸಿಕ್ಕಿತ್ತು. ನಾನು ಯಾರು?

## ಈ ರೀತಿಯೂ ಕೂಡಿಸಬಹುದು

- 363 ನ್ನು ಮೂರು ಸಲ ಕೂಡಿಸಿರುವುದು ಹೇಗೆ?

**ರೀತಿ : 1**

300 + 60 + 3 +
300 + 60 + 3
300 + 60 + 3

900 + 180 + 9

900 + 100 + 89 = 1089

**ರೀತಿ : 2**

300 ನ್ನು 3 ರಿಂದ ಗುಣಿಸಿದರೋ ?
ಇದೇ ರೀತಿ 60 ಮತ್ತು 3 ನ್ನು 3 ರಿಂದ ಗುಣಿಸಿ ಬರೆಯುವ.

$300 \times 3 = 900 +$ $(3 \times 3 \times 100 = 900)$
$60 \times 3 = 180$ $(3 \times 6 \times 10 = 180)$
$3 \times 3 = 9$

1089

- ಲಿನಿ ಶೂಟ್ ಮಾಡಿದಾಗ 363, 475, 750 ಎಂಬೀ ಸಂಖ್ಯೆಗಳು ಸಿಕ್ಕಿದವು. ಹಾಗಾದರೆ ಲಿನಿಗೆ ಲಭಿಸಿದ ಅಂಕ ಎಷ್ಟು?

**ರೀತಿ : 1**

363 + 475 + 750
363 + 475 = 300 + 60 + 3 + 400 + 70 + 5
= 300 + 400 + 60 + 70 + 3 + 5
= 700 + 130 + 8
= 830 + 8 = 838
838 + 750 = 800 + 30 + 8 + 700 + 50
= 800 + 700 + 30 + 50 + 8
= 1500 + 80 + 8 = 1588

**ರೀತಿ : 2**

363 + 475 + 750

| 300 + 60 + 3<br>400 + 70 + 5<br>700 + 50<br>1400 +180 + 8 | 1400 + 100 + 80 + 8<br>= 1500 + 88<br>= 1588 |
|---|---|

**ಹೀಗೆಯೂ ಲೆಕ್ಕ ಹಾಕಬಹುದು.**

363 +
475
838

838 +
750
1588

363 +
475
750
1588

ಅತಿ ಹೆಚ್ಚು ಅಂಕಗಳನ್ನು ಪಡೆದವರು ಯಾರು? ______________

ವಿಜೇತರ ಹೆಸರು ______________

ಕಡಿಮೆ ಅಂಕಗಳಿಂದ ಹೆಚ್ಚು ಅಂಕ ಗಳಿಸಿದವರ ಕಡೆಗೆ ಹೆಸರುಗಳನ್ನು ಕ್ರಮವಾಗಿ ಬರೆಯಿರಿ...

________, ________, ________, ________, ________

3 ಸಲ ಶೂಟ್ ಮಾಡುವಾಗ ಒಬ್ಬರಿಗೆ ಸಿಗಬಹುದಾದ ಗರಿಷ್ಠ ಅಂಕ ಎಷ್ಟು? ______________

## 1089 ರ ಕೌತುಕ

- ಅನುಕ್ರಮವಾದ ಯಾವುದಾದರೂ 3 ಅಂಕೆಗಳನ್ನು ಬರೆಯಿರಿ.
- ಇವುಗಳನ್ನು ಉಪಯೋಗಿಸಿ ಮಾಡಬಹುದಾದ ಅತಿ ದೊಡ್ಡ ಮೂರಂಕೆ ಸಂಖ್ಯೆಯನ್ನು ಬರೆಯಿರಿ. ________________
- ಅತೀ ಸಣ್ಣ ಮೂರಂಕೆ ಸಂಖ್ಯೆಯನ್ನು ಬರೆಯಿರಿ. ________________
- ಸಂಖ್ಯೆಗಳ ವ್ಯತ್ಯಾಸವನ್ನು ಕಂಡುಹಿಡಿಯಿರಿ.
- ವ್ಯತ್ಯಾಸವಾಗಿ ಲಭಿಸಿದ ಸಂಖ್ಯೆಯನ್ನು ತಿರುಗಿಸಿ ಬರೆಯಿರಿ.
- ಎರಡು ಸಂಖ್ಯೆಗಳನ್ನು ಪರಸ್ಪರ ಕೂಡಿಸಿರಿ.

ಯಾವುದೇ 3 ಅಂಕೆಗಳನ್ನು ತೆಗೆದುಕೊಂಡರೂ ಇದೇ ಉತ್ತರ ಲಭಿಸುವುದೋ? ಪ್ರಯತ್ನಿಸಿ ನೋಡಿರಿ.

## ಡೈಸ್ ಕಾರ್ನರ್

ಡೈಸನ್ನು ನೋಡಿರಿ.

ನಾವೂ ಡೈಸ್ ಆಡೋಣವೇ.



ನಾಲ್ಕಂಕೆ ಡೈಸನ್ನು ಒಂದು ಸಲವೂ ಮೂರಂಕೆಯ ಡೈಸನ್ನು ಒಂದು ಸಲವೂ ಎಸೆದು ಸಿಕ್ಕಿದ ಸಂಖ್ಯೆಗಳನ್ನು ಪರಸ್ಪರ ಕೂಡಿಸಬೇಕು.






ಧ್ವನಿ ಡೈಸ್ ಎಸೆದಾಗ ಸಿಕ್ಕಿದ ಸಂಖ್ಯೆಗಳು

| 2349 | 251 |
|---|---|



ಧ್ವನಿ ಪಡೆದ ಅಂಕವು 2349 ಮತ್ತು 251 ರ ಮೊತ್ತವಾಗಿದೆ.

ಧ್ವನಿ ಗಳಿಸಿದ ಅಂಕ

- ತಂದೆಯು ಮೊತ್ತವನ್ನು ಲೆಕ್ಕ ಮಾಡಿದ ರೀತಿ

$2349 + 251 = 2349 + 1 + 250$

$= 2350 + 250 = 2600$

- ತಾಯಿಯು ಲೆಕ್ಕ ಮಾಡಿದ ರೀತಿ

$2349 + 251 = 2000 + 349 + 251$

$= 2000 + 350 + 250$

$= 2600$

- ಧನುವು ಲೆಕ್ಕ ಮಾಡಿದ ರೀತಿ

$2349 + 251$

$= 2300 + 200 + 49 + 51$

$= 2500 + 100$

$= 2600$

- ಧ್ವನಿಯು ಲೆಕ್ಕ ಮಾಡಿದ ರೀತಿ

$2349 + 251 = 2000 + 300 + 40 + 9 +$

$200 + 50 + 1$

$2000 + 500 + 90 + 10$

$= 2600$

## ಕೂಡಿಸುವುದೂ ಕಳೆಯುವುದೂ

ಧನು ಡೈಸ್ ಎಸೆದು ಗಳಿಸಿದ ಅಂಕಗಳನ್ನು ಕೂಡಿಸಿ ಬರೆದಿರುವುದನ್ನು ನೋಡಿರಿ. ಲಭಿಸಿದ ಸಂಖ್ಯೆಗಳು ಯಾವುವು?




| | |
|---|---|
| 5013 + .................. | = 5413 |
| .................. + 343 | = 3445 |
| ................ + ................ | = 4850 |

| ಡೈಸ್ 1 | ಡೈಸ್ 2 | ಮೊತ್ತ |
|---|---|---|
| 4450 | 400 | |
| 2351 | 343 | |
| | 434 | 5447 |
| 5123 | | 5357 |
| 2349 | 341 | |
| 5013 | 251 | |

ಪೂರ್ತಿಗೊಳಿಸಿರಿ



## ಸ್ಪೋರ್ಟ್ಸ್ ಕಾರ್ನರ್




ಧನುವಿಗೆ ಬ್ಯಾಟ್ ಮತ್ತು ಬಾಲ್ ಹಾಗೂ ಧ್ವನಿಗೆ ಸೈಕಲನ್ನು ಖರೀದಿಸಿದರು.




- ಸೈಕಲಿನ ಬೆಲೆ ______________
- ಬ್ಯಾಟ್ ಮತ್ತು ಬಾಲ್‌ನ ಬೆಲೆ ______________
- ಅಂಗಡಿಯವನಿಗೆ ಕೊಟ್ಟ ಹಣ ______________

ಅಂಗಡಿಯಲ್ಲಿ ತಂದೆ ಕೊಟ್ಟ ಹಣವನ್ನು ಯಾವ ಯಾವ ರೀತಿಯ ನೋಟುಗಳ ಮತ್ತು ನಾಣ್ಯಗಳ ಮೊತ್ತವಾಗಿ ಬರೆಯಬಹುದು?

| ನಾನು ಲೆಕ್ಕ ಮಾಡಿದ ರೀತಿ | ಗೆಳೆಯ ಲೆಕ್ಕ ಮಾಡಿದ ರೀತಿ |
| --- | --- |
| | |

## ಮ್ಯಾಜಿಕ್ ಕಾರ್ನರ್



ಹಾಯ್...
ಮ್ಯಾಜಿಕ್!

ಬನ್ನಿ...
ಮ್ಯಾಜಿಕ್ ನಲ್ಲಿ ಭಾಗವಹಿಸಿರಿ.
ಸೂಚನೆಗಳನ್ನು ನಾನು
ಹೇಳುತ್ತೇನೆ.



### ಸೂಚನೆಗಳು

- ನೀವು ಒಂದು ನಾಲ್ಕಂಕೆ ಸಂಖ್ಯೆಯನ್ನು ಬರೆಯಬೇಕು.
- ನಾನು ಒಂದು ಸಂಖ್ಯೆಯನ್ನು ಬರೆದು ಪೆಟ್ಟಿಗೆಯಲ್ಲಿ ಹಾಕುತ್ತೇನೆ.
- ನಂತರ ನೀವು ಬರೆದ ಸಂಖ್ಯೆಯ ಕೆಳಗೆ ನಾನೊಂದು ಸಂಖ್ಯೆಯನ್ನು ಬರೆಯುತ್ತೇನೆ.
- ಪುನಃ ನೀವು ಒಂದು ನಾಲ್ಕಂಕೆ ಸಂಖ್ಯೆಯನ್ನು ಬರೆಯಬಹುದು.
- ಅದರ ಕೆಳಗೆ ನಾನೊಂದು ನಾಲ್ಕಂಕೆ ಸಂಖ್ಯೆಯನ್ನು ಬರೆಯುತ್ತೇನೆ.
- ಈ ನಾಲ್ಕು ನಾಲ್ಕಂಕೆಯ ಸಂಖ್ಯೆಗಳ ಮೊತ್ತವನ್ನು ನೀವು ಲೆಕ್ಕ ಹಾಕಬೇಕು.
- ನಂತರ ನಾನು ಬರೆದು ಪೆಟ್ಟಿಗೆಯಲ್ಲಿ ಹಾಕಿದ ಸಂಖ್ಯೆಯನ್ನು ನಿಮಗೆ ತೋರಿಸುತ್ತೇನೆ.

ಧನು ಬರೆದ ಸಂಖ್ಯೆ - 4325

ಜಾದೂಗಾರ ಬರೆದ ಸಂಖ್ಯೆ - 5674

ಧನು ಬರೆದ ಸಂಖ್ಯೆ - 1408

ಜಾದೂಗಾರ ಬರೆದ ಸಂಖ್ಯೆ - 8591

ಮೊತ್ತ ______________

ಜಾದೂಗಾರ ಕಾಗದದಲ್ಲಿ ಬರೆದು ಪೆಟ್ಟಿಗೆಯಲ್ಲಿ ಹಾಕಿದ ಸಂಖ್ಯೆ ಮತ್ತು ಮೊತ್ತವನ್ನು ನೋಡಿರಿ... ನಿಮಗೆ ಏನು ಅರ್ಥವಾಯಿತು?

**ನಾನು ಕಂಡುಕೊಂಡದ್ದು**






ಇದು 20000 ಕ್ಕಿಂತ 2 ಕಡಿಮೆಯಾಗಿರುವ ಸಂಖ್ಯೆಯಲ್ಲವೇ?

## ಫೋಟೋ ಕಾರ್ನರ್

ಧ್ವನಿ ಮತ್ತು ಧನು ಫೋಟೋ ಕಾರ್ನರ್‌ಗೆ ತಲುಪಿ ಫೋಟೋ ತೆಗೆದರು. ಸಂಖ್ಯಾ ಚಿಟ್ಟೆಯ ಸಂಖ್ಯೆಗಳ ಅಂಕೆಗಳ ಕ್ರಮವನ್ನು ತಿರುಗಿಸಿ ಬರೆದು ಕೂಡಿಸಿ ನೋಡಿರಿ.




ಧನು ಆಯ್ಕೆ ಮಾಡಿದ ಸಂಖ್ಯೆ
4123
ಸಂಖ್ಯಾ ಕ್ರಮ ತಿರುಗಿಸಿ ಬರೆದ ಸಂಖ್ಯೆ
3214

| ಧನು ಲೆಕ್ಕ ಮಾಡಿದ ರೀತಿ | |
|---|---|
| 4123 = 4000 + 100 + 20 + 3<br>3214 = 3000 + 200 + 10 + 4<br>7000 + 300 + 30 + 7 = 7337<br>4123 + 3214 = 7337 | ಧ್ವನಿ ಆರಿಸಿದ ಸಂಖ್ಯೆ = 4002<br>ತಿರುಗಿಸಿ ಬರೆದ ಸಂಖ್ಯೆ = ........<br>ಮೊತ್ತ = ........<br>ಕೂಡಿಸುವುದು ಹೇಗೆ? |

## ಉತ್ತರ ಹೂವುಗಳು

ಸಂಖ್ಯಾ ಚಿಟ್ಟೆಯಲ್ಲಿನ ಸಂಖ್ಯೆಗಳ ಅಂಕೆಗಳ ಕ್ರಮ ತಿರುಗಿಸಿ ಬರೆದು ಕೂಡಿಸಿದಾಗ ಸಿಕ್ಕಿದ ಉತ್ತರ ಹೂವುಗಳಿಗೆ ಬಣ್ಣ ಹಚ್ಚಿರಿ...




**ಪಾಲಿನ್‌ಡ್ರೋಮಿಕ್ ಸಂಖ್ಯೆಗಳು**

ಎಡ ಭಾಗದಿಂದಲೂ ಬಲಭಾಗದಿಂದಲೂ ಒಂದೇ ರೀತಿಯಲ್ಲಿ ಓದಬಹುದಾದ ಸಂಖ್ಯೆಗಳು ಪಾಲಿನ್‌ಡ್ರೋಮಿಕ್ ಸಂಖ್ಯೆಗಳಾಗಿವೆ.

ಎಲ್ಲಾ ನಾಲ್ಕಂಕೆಯ ಸಂಖ್ಯೆಗಳ ಅಂಕೆಗಳ ಕ್ರಮ ತಿರುಗಿಸಿ ಬರೆದು ಕೂಡಿಸಿದಾಗಲೂ ಪಾಲಿನ್‌ಡ್ರೋಮಿಕ್ ಸಂಖ್ಯೆಗಳೇ ಸಿಗುತ್ತವೆಯೇ? ಕಂಡುಹಿಡಿದು ನೋಟ್ ಪುಸ್ತಕದಲ್ಲಿ ಬರೆಯಿರಿ.

## ಮೊತ್ತ ನೋಡುವ



## ಗೇಮ್ ಕಾರ್ನರ್

ಧನು ಮತ್ತು ಧ್ವನಿ ಕಂಪ್ಯೂಟರ್‌ನಲ್ಲಿ ಕಾರ್ ರೇಸ್ ಆಡುತ್ತಿದ್ದಾರೆ. ಆಟದಲ್ಲಿ ಭಾಗವಹಿಸಿದವರ ಅಂಕಗಳನ್ನು ನೋಡಿರಿ.



**ಲಭಿಸಿದ ಅಂಕಗಳು**

| ಹೆಸರು | ರೌಂಡ್ 1 | ರೌಂಡ್ 2 |
|---|---|---|
| ಧನು | 2143 | 1457 |
| ಧ್ವನಿ | 1148 | 2067 |
| ನನ್ನ | 1654 | 1188 |
| ಮಿನಿ | 1876 | 1124 |

ಧನು ಪಡೆದ ಒಟ್ಟು ಅಂಕಗಳೆಷ್ಟು?

______________________________

**ರೀತಿ - 1**

2143 + 1457

2143 + 1000 = 3143

3143 + 400 = 3543

3543 + 50 = 3593

3593 + 7 = 3600

**ರೀತಿ - 2**

2143 + 1457

2143 = 2000 + 100 + 40 + 3

1457 = 1000 + 400 + 50 + 7

3000 + 500 + 90 + 10

= 3500 + 100

= 3600



**ಹೀಗೆಯೂ ಬರೆಯಬಹುದು**

```
 2143 +
 1457
 3600
```

ಕಾರ್ ರೇಸ್ ಸ್ಪರ್ಧೆಯಲ್ಲಿ 3000 ಕ್ಕಿಂತ ಹೆಚ್ಚು ಅಂಕಗಳನ್ನು ಗಳಿಸಿದವರು ಯಾರು? ಊಹಿಸಿ ಬರೆಯಿರಿ...

..............................................................................................

..............................................................................................

## ಊಹೆ ಸರಿಯಾಗಿದೆಯೇ?

| ಲಭಿಸಿದ ಅಂಕಗಳು | | | |
|---|---|---|---|
| ಹೆಸರು | ರೌಂಡ್ - 1 | ರೌಂಡ್ - 2 | ಒಟ್ಟು ಅಂಕ |
| ಧನು | 2143 | 1457 | 3600 |
| ಧ್ವನಿ | 1148 | 2067 | |
| ನನ್ಮ | 1654 | 1188 | |
| ಮಿನಿ | 1876 | 1124 | |

## ದರ ಕಡಿತ ಮಾರಾಟ

ನೋಟಿಸ್ ನೋಡಿರಿ.




ಧ್ವನಿಯ ಮನೆಗೆ ಮಂಚ ಮತ್ತು ಟಿವಿ ಖರೀದಿಸಲು ಎಷ್ಟು ರೂಪಾಯಿ ಬೇಕು?

__________

ಟಿವಿ ಮತ್ತು ಕಪಾಟು ಖರೀದಿಸಲು ಎಷ್ಟು ರೂಪಾಯಿ ಬೇಕು? __________

ವಾಶಿಂಗ್ ಮೆಷಿನ್ ಮತ್ತು ಮಂಚವನ್ನು ಖರೀದಿಸಬೇಕಾದರೆ ಎಷ್ಟು ಹಣ ಬೇಕು?

__________

ಅಂಗಡಿಯಿಂದ ಒಂದು ವಸ್ತುವನ್ನು ಖರೀದಿಸಿ 100 ರೂಪಾಯಿಯ ನೂರು ನೋಟುಗಳ ಒಂದು ಕಟ್ಟನ್ನು ಕೊಟ್ಟರು. ಬಾಕಿ 1 ರೂಪಾಯಿ ಸಿಕ್ಕಿತು. ಖರೀದಿಸಿದ ವಸ್ತು ಯಾವುದಾಗಿರಬಹುದು?

__________

- ನಿಮ್ಮ ಕೈಯಲ್ಲಿ 12000 ರೂಪಾಯಿ ಇರುವುದಾದರೆ ಯಾವ ಯಾವ ವಸ್ತುಗಳನ್ನು ಖರೀದಿಸುವಿರಿ? ಕಾರಣವನ್ನು ಬರೆಯಿರಿ.

## ಬ್ಯಾಟಿಂಗ್ ಕಾರ್ನರ್

ಧನು ಮತ್ತು ಧ್ವನಿ ಬ್ಯಾಟಿಂಗ್ ಕಾರ್ನರ್ ತಲುಪಿದರು. ಒಬ್ಬರಿಗೆ ಮೂರು ಓವರ್ ಬ್ಯಾಟ್ ಮಾಡಬಹುದು. ಪ್ರತಿಯೊಂದು ಓವರ್ ಮುಗಿದಾಗಲೂ ಅಂಕಗಳು ಲಭಿಸುತ್ತವೆ. ಆಟದ ನಂತರ ಪಡೆದ ಅಂಕಗಳನ್ನು ನೋಡಿರಿ...














**ಬಹುಮಾನ**
ಒಟ್ಟು 7000 ಕ್ಕಿಂತ ಹೆಚ್ಚು ಅಂಕಗಳನ್ನು ಗಳಿಸಿದರೆ ಡ್ರ್ಯಾಗನ್ ರೈಲಿನ ಟಿಕೆಟ್ ಬಹುಮಾನವಾಗಿ ಲಭಿಸುವುದು.

### ಅಂಕಪಟ್ಟಿ

| ಹೆಸರು | ಲಭಿಸಿದ ಅಂಕ | | | ಒಟ್ಟು |
|---|---|---|---|---|
| ಧನು | | | | |
| ಜಿನ್ನಿ | | | | |
| ಧ್ವನಿ | | | | |

ಯಾರೆಲ್ಲಾ ಡ್ರ್ಯಾಗನ್ ರೈಲಿನ ಟಿಕೆಟ್ ಪಡೆದರು?
ಕಂಡುಹಿಡಿದು ಬರೆಯಿರಿ.



**(1) ಮೊತ್ತ ಲೆಕ್ಕ ಹಾಕಿ ಖಾಲಿಬಿಟ್ಟ ಕೋಣೆಗಳಲ್ಲಿ ಬರೆಯಿರಿ...**

A ಎಂಬ ಕೋಣೆಯ ಸಂಖ್ಯೆ ಲಭಿಸಲು 2850 +1400 ಲೆಕ್ಕ ಹಾಕಬೇಕು.




A = ..........

B = ..........

C = ..........

D = ..........

E = ..........

**(2) ಮುಂದಿನ 5 ಸಂಖ್ಯೆಗಳನ್ನು ಬರೆಯಿರಿ.**

- 4100, 5100, 6100, .............., .............., .............., .............., ..............
- 2352, 2852, 3332 , .............., .............., .............., .............., ..............
- 1000, 2111, 3222, .............., .............., .............., .............., ..............
- 2839, 3748, 4657, .............., .............., .............., .............., ..............

**(3) ಖಾಲಿ ಬಿಟ್ಟ ಕೋಣೆಯ ಸಂಖ್ಯೆ ಯಾವುದು?**

| | |
|---|---|
| 1500 | 1750 |
| ? | 2050 |

(A) 3000 (B) 2400 (C) 2300 (D) 2150

**(4) ಶೂಟಿಂಗ್ ಬೋರ್ಡ್ ನೋಡಿದಿರಲ್ಲವೇ. ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**




- ಪ್ರತಿಯೊಂದು ಕೋಣೆಗಳಲ್ಲೂ ಒಂದೊಂದು ಸಲ ಶೂಟ್ ಮಾಡಿ ಆಡಿದರೆ ಎಷ್ಟು ಅಂಕ ಲಭಿಸುತ್ತದೆ?
- ಧ್ವನಿ 3 ಸಲ 1000 ದ ಕೋಣೆಯೊಳಗೂ 2 ಸಲ 10 ರ ಕೋಣೆಯೊಳಗೂ ಶೂಟ್ ಮಾಡಿದಳು. ಎಷ್ಟು ಅಂಕಗಳು ಸಿಕ್ಕಿತು?
- ಧನು 10 ಸಲ ಶೂಟ್ ಮಾಡಿದಾಗ ಸಿಕ್ಕಿದ ಸಂಖ್ಯೆ 5140 ಆಗಿದೆ. ಯಾವ ಯಾವ ಕೋಣೆಗಳಲ್ಲಿ ಎಷ್ಟು ಸಲ ಶೂಟ್ ಮಾಡಿರಬಹುದು?
- ಕೆಳಗೆ ಕೊಟ್ಟಿರುವವುಗಳಲ್ಲಿ 10 ಸಲ ಶೂಟ್ ಮಾಡಿ ಗಳಿಸಿದ ಅಂಕ ಯಾವುದು?

  (A) 5142, (B) 6280, (C) 4510, (D) 1245
- ಒಬ್ಬರು ಹಲವು ಬಾರಿ ಶೂಟ್ ಮಾಡಿದಾಗ 3333 ಸಿಕ್ಕಿತು. ಕನಿಷ್ಠ ಎಷ್ಟು ಸಲ ಶೂಟ್ ಮಾಡಿರಬಹುದು?

# 5
# ಸಮಯವಾಯಿತು




11:30 ರಿಂದ 3.30 ರವರೆಗೆ ಎಷ್ಟು ಗಂಟೆಗಳು ?

11:15 ರಿಂದ 11:30 ರವರೆಗೆ ಎಷ್ಟು ಮಿನಿಟುಗಳು ?

11:15 ರಿಂದ 3:30 ರ ವರೆಗೆ .............. ಗಂಟೆಗಳು .............. ಮಿನಿಟುಗಳು.

## ನಿಧಿಯ ಮನೆಯಲ್ಲಿ

09:15:00

ನಿಧಿಯ ಶಾಲಾ ಬಸ್ಸು ತಲುಪುವ ಸಮಯವನ್ನು ಗಡಿಯಾರದಲ್ಲಿ ಚಿತ್ರಿಸಿರಿ...







..........ಗಂಟೆ......... ಮಿನಿಟು

## ನಿಧಿಯ ಶಾಲೆ

ಡಿಜಿಟಲ್ ಗಡಿಯಾರವನ್ನು ನೋಡಿರಿ...




| | | | | |
|---|---|---|---|---|
| 09:29:57 | 09:29:58 | 09:29:59 | 09:30:00 | 09:30:01 |
| 09:30:02 | .............. | .............. | .............. | .............. |



ಡಿಜಿಟಲ್ ಗಡಿಯಾರದ ಮುಂದಿನ ಸಮಯವನ್ನು ಬರೆಯಿರಿ.

ಮೇಲಿನ ಚಿತ್ರದಲ್ಲಿನ ಸಮಯವನ್ನು ಗಮನಿಸಿದಿರೋ? ಯಾವೆಲ್ಲಾ ವಿಚಾರಗಳನ್ನು ತಿಳಿದುಕೊಂಡಿರುವಿರಿ?

9 ಗಂಟೆ 29 ಮಿನಿಟು 59 ಸೆಕೆಂಡ್‌ಗಳ ನಂತರದ ಸಮಯ ಎಷ್ಟು?

................ ಗಂಟೆ ................ಮಿನಿಟು ................ ಸೆಕೆಂಡ್

29 ಮಿನಿಟು 59 ಸೆಕೆಂಡ್‌ಗಳ ನಂತರದ ಸಮಯವನ್ನು ನೋಡಿರಿ.
ಎಷ್ಟಾಗಿದೆ ? 30 ಮಿನಿಟುಗಳು.
ಇದರಿಂದ ಏನನ್ನು ತಿಳಿದುಕೊಂಡಿರುವಿರಿ?




**ನಾನು ತಿಳಿದುಕೊಂಡದ್ದು.**

ಸೆಕೆಂಡ್ ಮತ್ತು ಮಿನಿಟ್




## ನಿಧಿಯು ಶಾಲೆಯಲ್ಲಿ

ನಿಧಿ ಶಾಲೆಗೆ ತಲುಪಿದ ಸಮಯವನ್ನು ನೋಡಿರಿ. ಅವಳು ಶಾಲೆಗೆ ತಲುಪಲು ಎಷ್ಟು ಸಮಯ ಪ್ರಯಾಣ ಮಾಡಿದಳು?

**ನಾನು ಕಂಡುಹಿಡಿದದ್ದು**



## ನಡಿಗೆ ಸ್ಪರ್ಧೆ

ನಡಿಗೆ ಸ್ಪರ್ಧೆ ಆರಂಭವಾದ ಸಮಯವನ್ನು ಡಿಜಿಟಲ್ ಗಡಿಯಾರದಲ್ಲಿ ಕೊಡಲಾಗಿದೆ.

10:30:00

100 ಮೀಟರ್ ನಡಿಗೆ ಸ್ಪರ್ಧೆಯನ್ನು ಪೂರ್ತಿಗೊಳಿಸಲು ಮಕ್ಕಳು ತೆಗೆದುಕೊಂಡ ಸಮಯವನ್ನು ನೋಡಿರಿ.






| ಹೆಸರು | ಸಮಯ |
|---|---|
| ಮಿಲಿ | 10:31:32 |
| ತನು | 10:31:25 |
| ಸಯ | 10:31:12 |
| ನಿಧಿ | 10:31:29 |
| ಅಯನ | 10:31:15 |







ಮಿಲಿ ನಡಿಗೆಯನ್ನು ಪೂರ್ತಿಗೊಳಿಸಿದ ಸಮಯ.

......... ಗಂಟೆ ......... ಮಿನಿಟ್ ......... ಸೆಕೆಂಡ್.

ತೆಗೆದುಕೊಂಡ ಸಮಯವೆಷ್ಟು? ......... ಮಿನಿಟ್‌ಗಳು ......... ಸೆಕೆಂಡ್‌ಗಳು

ಅತ್ಯಂತ ಕಡಿಮೆ ಸಮಯದಲ್ಲಿ ನಡಿಗೆಯನ್ನು ಪೂರ್ತಿಗೊಳಿಸಿದವರು ಯಾರು? ____________




ಪೂರ್ತಿಗೊಳಿಸಲು ತೆಗೆದುಕೊಂಡ ಸಮಯವೆಷ್ಟು?____________

ಸ್ಪರ್ಧೆಯಲ್ಲಿ 1, 2 ಮತ್ತು 3 ನೇ ಸ್ಥಾನ ಪಡೆದವರ ಹೆಸರನ್ನು ಕ್ರಮವಾಗಿ ಬರೆಯಿರಿ.

____________, ____________, ____________

ನೀವು ಓಟದ ಸ್ಪರ್ಧೆಯನ್ನು ನಡೆಸುವಿರಲ್ಲವೇ.
ಓಡಿ ತಲುಪಿದ ಸಮಯವನ್ನು ಲೆಕ್ಕಹಾಕಿರಿ.

## ಕಣ್ಣಾಮುಚ್ಚಾಲೆ ಆಟ










*ಮೊಬೈಲ್ ಫೋನಿನ ಡಿಜಿಟಲ್ ಗಡಿಯಾರ*

**1 ರಿಂದ 50 ರವರೆಗೆ ಎಣಿಸಲು ಬೇಕಾದ ಸಮಯ**




ನನ್ನ ಊಹೆ

ಎಣಿಸಲು ತೆಗೆದುಕೊಂಡ ಸಮಯ ? ____________________

ಗೆಳೆಯರು ಎಣಿಸಲು ತೆಗೆದುಕೊಳ್ಳುವ ಸಮಯವನ್ನು ಪಟ್ಟಿಯಲ್ಲಿ ಬರೆಯಿರಿ.

| | | | | |
|---|---|---|---|---|
| ಹೆಸರು | | | | |
| ಸಮಯ | | | | |

ಎಣಿಸಲು ತೆಗೆದುಕೊಂಡ ಅತಿ ಕಡಿಮೆ ಸಮಯ ____________________

ಅತಿ ಹೆಚ್ಚು ಸಮಯ ____________________

## ನನ್ನ ಸಮಯ

ನಿಮಗೆ ಒಂದು ಮಿನಿಟ್‌ನಲ್ಲಿ ಪೂರ್ತಿಗೊಳಿಸಲು ಸಾಧ್ಯವಿರುವ ಚಟುವಟಿಕೆಗಳನ್ನು ಬರೆಯಿರಿ...

•
•
•
•
•
•

## ನಡೆಯುವ... ಸಮಯ ನೋಡುವ...

ತರಗತಿ ಕೋಣೆಯ ಒಳಗೆ ಗೋಡೆಯ ಸಮೀಪವಾಗಿ ಒಂದು ಸುತ್ತು ನಡೆಯಿರಿ. ನಡೆಯಲು ತೆಗೆದುಕೊಂಡ ಸಮಯವನ್ನು ಸ್ಟೋಪ್ ವಾಚ್ ಉಪಯೋಗಿಸಿ ಕಂಡುಹಿಡಿಯಿರಿ.

___________________________

### ಸುತ್ತು ಸುತ್ತುವ

ಸುತ್ತು ಸುತ್ತು ತಿರುಗುತ
ಗಂಟೆ ಮುಳ್ಳು ತಿರುಗುತ
ಎರಡು ಸುತ್ತು ತಿರುಗಿದರೆ
ಪೂರ್ತಿಯಾಗುವುದೊಂದು ದಿನ.
ಸುತ್ತು ಸುತ್ತು ತಿರುಗುತ
ಮಿನಿಟು ಮುಳ್ಳು ತಿರುಗುತ
ಎಷ್ಟು ಸುತ್ತು ತಿರುಗಿದರೆ
ಪೂರ್ತಿಯಾಗುವುದೊಂದು ದಿನ.

### ಪಝಿಲ್ ಕಾರ್ನರ್

ಕೊಟ್ಟಿರುವ ಸಂಖ್ಯೆಯನ್ನು ನೋಡಿರಿ.

101

ಸಂಖ್ಯೆಯಲ್ಲಿ ಯಾವುದಾದರೂ ಎರಡು ಗೆರೆಯನ್ನು ಬದಲಾಯಿಸುವ ಮೂಲಕ ಮಾಡಬಹುದಾದ ಅತಿ ದೊಡ್ಡ ಸಂಖ್ಯೆ ಯಾವುದು ?

___________________________

101 ರ ಸೊನ್ನೆಯಲ್ಲಿನ ಒಂದು ಗೆರೆಯನ್ನು ತೆಗೆದು ಅದನ್ನು ಸೊನ್ನೆಯ ಮಧ್ಯದಲ್ಲಿ ಇರಿಸಲಾಯಿತು. ಎಷ್ಟು ಸಿಕ್ಕಿತು? 191

191 ಕ್ಕಿಂತ ದೊಡ್ಡ ಸಂಖ್ಯೆಗಳನ್ನು ಮಾಡಲು ಸಾಧ್ಯವೇ.

## ಆರಂಭದಿಂದ ಅಂತ್ಯದವರೆಗೆ

ಚಿತ್ರವನ್ನು ನೋಡಿರಿ. ಚಿತ್ರಿಸಲು ಪ್ರಾರಂಭಿಸಿದ ನಂತರ, ಮುಗಿಸುವವರೆಗೆ ಪೆನ್ಸಿಲನ್ನು ಕಾಗದದಿಂದ ತೆಗೆಯಬಾರದು. ಎಳೆದ ಗೆರೆಯ ಮೇಲೆ ಮತ್ತೆ ಗೆರೆ ಎಳೆಯಬಾರದು. ಎಳೆಯಲು ಎಷ್ಟು ಸಮಯ ಬೇಕಾಯಿತು?



............... ಸೆಕೆಂಡ್




## ನಮಗೂ ಗಡಿಯಾರ

ನಿಧಿಯ ತರಗತಿಯ ಮಕ್ಕಳು ಗಡಿಯಾರವನ್ನು ತಯಾರಿಸುತ್ತಿದ್ದಾರೆ.











ಎಷ್ಟು ಗಂಟೆಗೆ ಪೂರ್ತಿಯಾಗಬಹುದು ?

ಗಡಿಯಾರದಲ್ಲಿ ಚಿತ್ರಿಸಿ ನೋಡಿರಿ.






ನಿರ್ಮಾಣ ಪೂರ್ತಿಗೊಳಿಸಲು ತೆಗೆದುಕೊಂಡ ಸಮಯವನ್ನು ಮಿನಿಟುಗಳಲ್ಲಿ ಬರೆಯಿರಿ.

.................. ಮಿನಿಟ್

ಅಬ್ಬಬ್ಬಾ!!
2 ಗಂಟೆಗಳು
= 120 ಮಿನಿಟು
= 7200 ಸೆಕೆಂಡುಗಳು!!

ನಿಧಿ ತಯಾರಿಸಿದ ಗಡಿಯಾರವನ್ನು ನೋಡಿರಿ.



ಸೆಕೆಂಡ್‌ನ ಮುಳ್ಳು 9 ರಿಂದ 12 ಕ್ಕೆ ತಲುಪಲು ತೆಗೆದುಕೊಳ್ಳುವ ಸಮಯ ........... ಸೆಕೆಂಡ್ ಆಗಿದೆ.

ಗಡಿಯಾರದಲ್ಲಿ ಸಮಯವನ್ನು ಬರೆಯಿರಿ. ..........ಗಂಟೆ ....... ಮಿನಿಟು .............. ಸೆಕೆಂಡು

ಗಂಟೆಯ ಮುಳ್ಳು ಒಂದು ಸುತ್ತು ಸುತ್ತಲು ಎಷ್ಟು ಸಮಯ ತೆಗೆದುಕೊಳ್ಳುತ್ತದೆ ?

............... ಗಂಟೆಗಳು

ಮಿನಿಟು ಮುಳ್ಳೋ?

............... ಗಂಟೆಗಳು

ಸೆಕೆಂಡ್ ಮುಳ್ಳೋ?

............... ಮಿನಿಟುಗಳು

ಸೆಕೆಂಡ್ ಮುಳ್ಳು ಗಡಿಯಾರದ ಮೂರು ಮುಳ್ಳುಗಳಲ್ಲಿ ಅತ್ಯಂತ ಸಪೂರವಾದ ಮತ್ತು ಅತಿ ಉದ್ದವಾದ ಮುಳ್ಳಾಗಿದೆ.

ಹೆಚ್ಚು ವೇಗದಲ್ಲಿ ಸುತ್ತುವ ಮುಳ್ಳು ಯಾವುದು? ____________________

## ಗಡಿಯಾರವನ್ನು ನೋಡಿರಿ... ಸಮಯವನ್ನು ಬರೆಯಿರಿ.

| ಚಿತ್ರ | ಸಮಯ | | |
|---|---|---|---|
| | ಗಂಟೆ | ಮಿನಿಟ್ | ಸೆಕೆಂಡ್ |
|  | | | |
|  | | | |

## ಸಮಯವನ್ನು ಗಡಿಯಾರದಲ್ಲಿ ಚಿತ್ರಿಸಿರಿ...



12 ಗಂಟೆ
50 ಮಿನಿಟು
30 ಸೆಕೆಂಡುಗಳು



6 ಗಂಟೆ
5 ಮಿನಿಟು
16 ಸೆಕೆಂಡುಗಳು

**ಪಝ್ಲ್ ಕಾರ್ನರ್**

ಒಂದು ಗಂಟೆಯ ಮೊದಲು ಸಮಯ 10 ಗಂಟೆ 15 ಮಿನಿಟ್ ಆಗಿತ್ತು. ಎರಡೂವರೆ ಗಂಟೆಗಳ ಬಳಿಕ ಸಮಯ ಎಷ್ಟಾಗಿರಬಹುದು?

____________________

## ಹನಿಗೂಡಿ ಹಳ್ಳ



ಈ ಟ್ಯಾಪ್‌ನಿಂದ ಒಂದು ಸೆಕೆಂಡ್‌ಗೆ ಒಂದು ಮಿಲ್ಲಿಲೀಟರ್ ನೀರು ಹರಿದು ಹೋಗುತ್ತದೆ. 10 ಮಿನಿಟುಗಳಲ್ಲಿ ಎಷ್ಟು ಮಿಲ್ಲಿಲೀಟರ್ ನೀರು ಹರಿದು ಹೋಗುತ್ತದೆ?

________________




**ನಾನು ಲೆಕ್ಕ ಮಾಡಿದ ರೀತಿ**

### ಸೆಕೆಂಡ್‌ಗಳು ಮಾತ್ರ

| | |
|---|---|
| ಸೆಕೆಂಡ್ ಮುಳ್ಳು 12 ರಿಂದ 1ಕ್ಕೆ ತಲುಪಲು ತೆಗೆದುಕೊಂಡ ಸಮಯ. | |
| ಸೆಕೆಂಡ್ ಮುಳ್ಳು 12 ರಿಂದ 2ಕ್ಕೆ ತಲುಪಲು ತೆಗೆದುಕೊಂಡ ಸಮಯ | |
| ಸೆಕೆಂಡ್ ಮುಳ್ಳು 12 ರಿಂದ ಆರಂಭಿಸಿ 15 ಸೆಕೆಂಡ್ ಆಗುವಾಗ ಯಾವ ಸಂಖ್ಯೆಯ ನೇರ ತಲುಪುತ್ತದೆ. | |
| ಸೆಕೆಂಡ್ ಮುಳ್ಳು ಅರ್ಧ ವೃತ್ತವನ್ನು ಸುತ್ತಲು ತೆಗೆದುಕೊಳ್ಳುವ ಸಮಯ. | |



## ಅಡುಗೆ ಸ್ಪರ್ಧೆ



ಶಾಲಾ ಪೂರ್ವ ವಿದ್ಯಾರ್ಥಿ ಸಂಗಮದಲ್ಲಿ ಹಲವು ತರದ ಪಾಯಸಗಳನ್ನು ತಯಾರಿಸಿದರು.

ಅಡುಗೆ ಪ್ರಾರಂಭಿಸಿದ ಸಮಯವನ್ನು ಗಡಿಯಾರದಲ್ಲಿ ತೋರಿಸಲಾಗಿದೆ.




ಪ್ರತಿಯೊಬ್ಬರು ಅಡುಗೆ ಮಾಡಿ ಮುಗಿಸಲು ತೆಗೆದುಕೊಂಡ ಸಮಯವನ್ನು ಅವರ ಸಮೀಪದಲ್ಲಿರುವ ಗಡಿಯಾರದಲ್ಲಿ ಚಿತ್ರಿಸಿರಿ.

ಅಡುಗೆ ಮಾಡಲು ತೆಗೆದುಕೊಂಡ ಅತಿ ಹೆಚ್ಚು ಸಮಯ ________

ಅತಿ ಕಡಿಮೆ ಸಮಯ ________

## ನೋಟಿಸ್ ಬೋರ್ಡ್

15.12.2025

**ಡಿಸೆಂಬರ್ 22**

**ರಾಷ್ಟ್ರೀಯ ಗಣಿತಶಾಸ್ತ್ರ ದಿನ**

ರಾಷ್ಟ್ರೀಯ ಗಣಿತಶಾಸ್ತ್ರ ದಿನಾಚರಣೆಯ ಪೂರ್ವಭಾವಿಯಾಗಿ **20.12.2025** ರಂದು ಸ್ಪರ್ಧೆಗಳು ನಡೆಯಲಿವೆ. ಸ್ಪರ್ಧಿಸಲು ಆಸಕ್ತಿಯುಳ್ಳ ವಿದ್ಯಾರ್ಥಿಗಳು ಇಂದು ಮಧ್ಯಾಹ್ನ 1:30 ಕ್ಕೆ ಮೊದಲು ತಮ್ಮ ತರಗತಿ ಅಧ್ಯಾಪಕರಲ್ಲಿ ಹೆಸರು ನೀಡಬೇಕು.

**ಸ್ಪರ್ಧೆಗಳು**

- ಗಣಿತ ರಸಪ್ರಶ್ನೆ
- ಗಣಿತ ಪಝಲ್
- ನಮೂನೆಗಳ ರಚನೆ










ಹೆಸರು ನೀಡಲು ಕೊನೆಯ ದಿನಾಂಕ ಯಾವುದು? ________________

ಉಪಜಿಲ್ಲಾ ಮಟ್ಟದ ಸ್ಪರ್ಧೆಗಳು 1.1.2026 ಕ್ಕೆ ನಡೆಯಲಿರುವುದು.

- ಶಾಲಾಮಟ್ಟದ ಸ್ಪರ್ಧೆಗಳು ಮುಗಿದ ನಂತರ ಎಷ್ಟನೇ ದಿನದಂದು ಉಪಜಿಲ್ಲಾ ಮಟ್ಟದ ಸ್ಪರ್ಧೆಗಳು ಆರಂಭವಾಗುವುದು?

  ________________

## ಕ್ಯಾಲೆಂಡರ್ ನೋಡಿ... ಕಂಡು ಹಿಡಿಯಿರಿ...

- ಈ ವರ್ಷದ ಕ್ಯಾಲೆಂಡರ್ ನೋಡಿರಿ. ಡಿಸೆಂಬರ್ 22 ಯಾವ ವಾರವಾಗಿದೆ ?

  ________________

- ಮಾರ್ಚ್ 28 ಗುರುವಾರವಾಗಿದೆ. ಮಾರ್ಚ್ 11 ಯಾವ ವಾರವಾಗಿತ್ತು ?

  ________________

- ಇಂದು ಆದಿತ್ಯವಾರವಾಗಿದೆ. 24 ನೇ ದಿನ ಯಾವ ವಾರವಾಗಿರಬಹುದು ?

  ________________

## ಕ್ಯಾಲೆಂಡರ್ ಲೆಕ್ಕ




ಕ್ಯಾಲೆಂಡರ್‌ನಲ್ಲಿ ಗುರುತಿಸಿರುವ ಪ್ರತಿಯೊಂದು ಸೆಟ್ ಸಂಖ್ಯೆಗಳನ್ನು ನೋಡಿರಿ. ಏನಾದರೂ ಸಂಬಂಧವಿದೆಯೇ? ನೋಟ್ ಪುಸ್ತಕದಲ್ಲಿ ಬರೆಯಿರಿ.

**ಮುಂದಿನ ಸಂಖ್ಯೆಗಳನ್ನು ಬರೆಯಬಹುದೇ?**

- 3, 10, 17, ——, ——
- 4, 12, 20, ——, ——
- 2, 8, 14, ——, ——

**ನಾನು ಕಂಡುಕೊಂಡದ್ದು**

- ಕ್ಯಾಲೆಂಡರ್ ನೋಡಿ ಹೆಚ್ಚಿನ ನಮೂನೆಗಳನ್ನು ಕಂಡುಹಿಡಿಯಿರಿ.

1. ನಿಧಿಯ ಶಾಲೆಯಿಂದ ಪ್ರವಾಸಕ್ಕಾಗಿ ಬೆಳಗ್ಗೆ 5.30 ಕ್ಕೆ ಹೊರಟ ಬಸ್ಸು, ಜಿಲ್ಲೆಯ ಪ್ರವಾಸ ಕೇಂದ್ರಗಳನ್ನು ಸಂದರ್ಶಿಸಿ ಸಂಜೆ 5.30 ಕ್ಕೆ ಶಾಲೆಗೆ ಮರಳಿ ಬಂದಿತು. ಪ್ರವಾಸಕ್ಕೆ ತೆಗೆದುಕೊಂಡ ಒಟ್ಟು ಸಮಯವೆಷ್ಟು?
2. ಗಂಟೆಯ ಮುಳ್ಳು 7 ರಿಂದ ಆರಂಭಿಸಿ 3 ಕ್ಕೆ ತಲುಪಲು ತೆಗೆದುಕೊಳ್ಳುವ ಸಮಯವೆಷ್ಟು?
3. ಸೆಕೆಂಡ್ ಮುಳ್ಳು 5 ರಿಂದ 11 ಕ್ಕೆ ತಲುಪಲು ತೆಗೆದುಕೊಂಡ ಸಮಯ.......... ಸೆಕೆಂಡ್ ಆಗಿದೆ. ಇದು ............ ಮಿನಿಟು ಆಗಿದೆ.
4. 2 ಗಂಟೆಗಳ ಮೊದಲು ಸಮಯ ಒಂಬತ್ತುವರೆ ಆಗಿತ್ತು. ಮೂರುವರೆ ಗಂಟೆಗಳ ನಂತರ ಸಮಯವೆಷ್ಟು?
5. ಜನವರಿ ತಿಂಗಳ ಮೊದಲ ಶುಕ್ರವಾರ 2ನೇ ತಾರೀಕು ಆಗಿದೆ. ಶುಕ್ರವಾರ ಆಗಿರುವ ಇತರ ತಾರೀಕುಗಳು ಯಾವುವು?
6. ಏಳನೇ ತಾರೀಕು ಗುರುವಾರವಾದರೆ ಹದಿನೇಳನೇ ತಾರೀಕು ಯಾವ ವಾರವಾಗಿರಬಹುದು? 27ನೇ ತಾರೀಕು ಯಾವ ವಾರವಾಗಿರಬಹುದು?
7. ಸಮಯವನ್ನು ಬರೆಯಿರಿ...



............. ಗಂಟೆ
............. ಮಿನಿಟು
............. ಸೆಕೆಂಡ್



............. ಗಂಟೆ
............. ಮಿನಿಟು
............. ಸೆಕೆಂಡ್

8. ಸಮಯ ನೋಡಿರಿ... ಗಡಿಯಾರದಲ್ಲಿ ಚಿತ್ರಿಸಿರಿ...



4 ಗಂಟೆ
28 ಮಿನಿಟು
44 ಸೆಕೆಂಡ್



1 ಗಂಟೆ
45 ಮಿನಿಟು
40 ಸೆಕೆಂಡ್

# 6
# ಕಡಿಮೆಯಾಗುವ ಗುಂಪು



## ಅಬಾಕಸ್

ಕಿಚ್ಚು ಮತ್ತು ಗೆಳೆಯರು ಅಬಾಕಸ್ ತಯಾರಿಸಿ ಆಟವಾಡುತ್ತಿರುವರು.




- ಅಬಾಕಸ್‌ನಲ್ಲಿ ಸೂಚಿಸುವ ಸಂಖ್ಯೆ ಯಾವುದು ? __________
- ಈ ಸಂಖ್ಯೆಯಿಂದ ಎಷ್ಟು ಕಡಿಮೆ ಮಾಡಿದರೆ ಅತಿ ಸಣ್ಣ ಮೂರಂಕೆ ಸಂಖ್ಯೆ ಸಿಗುತ್ತದೆ? __________
- ಕಳೆದು ಸಿಕ್ಕಿದ ಸಂಖ್ಯೆಯನ್ನು ಅಬಾಕಸ್‌ನಲ್ಲಿ ಚಿತ್ರಿಸಿರಿ.




**ಪೂರ್ತಿಗೊಳಿಸಿರಿ...**

99 – 10 = .............

999 – 100= .............

9999 – 1000 = .............

## ಕಳೆದು ನೋಡುವ

- ಅತಿ ದೊಡ್ಡ ಮೂರಂಕೆ ಸಂಖ್ಯೆಯಿಂದ ಅತಿ ದೊಡ್ಡ ಎರಡಂಕೆ ಸಂಖ್ಯೆಯನ್ನು ಕಳೆದರೆ ಎಷ್ಟು ಸಿಗಬಹುದು ? ______________
- 340 ರಿಂದ 120 ಕಳೆದರೆ ಎಷ್ಟು ಸಿಗಬಹುದು?

ಕಿಚ್ಚುವಿನ ಉತ್ತರ ನೋಡಿರಿ...

34 ಹತ್ತುಗಳಿಂದ 12 ಹತ್ತುಗಳನ್ನು ಕಳೆದರೆ ಸಾಕು.

34 ಹತ್ತು - 12 ಹತ್ತು

= ______________ ಹತ್ತು = ______________



16 ಹತ್ತುಗಳೊಂದಿಗೆ ಎಷ್ಟು ಹತ್ತುಗಳನ್ನು ಕೂಡಿಸಿದರೆ 34 ಹತ್ತುಗಳು ಸಿಗಬಹುದೆಂದು ಲೆಕ್ಕ ಹಾಕಿದರೂ ಸಾಕು.

- 340 ರಿಂದ 160 ಕಡಿಮೆ ಮಾಡಬೇಕಾದರೋ ?

ಮಾಡಿನೋಡಿರಿ....

- 346 ರಿಂದ 162 ಕಡಿಮೆಮಾಡಿದರೋ ?

### ರೀತಿ : 1

162 ರೊಂದಿಗೆ ಎಷ್ಟು ಸೇರಿಸಿದರೆ 346 ಆಗುವುದು ಎಂದು ಕಂಡುಹಿಡಿದರೂ ಸಾಕು.

162 + 8 = 170

170 + 30 = 200

200 + 146 = 346

146 + 30 + 8 = 140 + 6 + 30 + 8

= 140 + 30 + 14

= 170 + 14

= 184

### ರೀತಿ : 2

346 → 300 + 40 + 6 –

162 → 100 + 60 + 2

| ನೂರು | ಹತ್ತು | ಒಂದು |
|---|---|---|
| 3 | 4 | 6 |
| 1 | 6 | 2 |

–

ಇದನ್ನು ಬದಲಾಯಿಸಿ ಬರೆದರೆ

346 → 200 + 140 + 6 –

162 → 100 + 60 + 2

100 + 80 + 4

ಹೀಗೆ ಬದಲಾಯಿಸಿ ಬರೆಯುವ.

| ನೂರು | ಹತ್ತು | ಒಂದು |
|---|---|---|
| 2 | 14 | 6 |
| 1 | 6 | 2 |
| | | |

–

**346 – 162 = 184**



ಹೀಗೆಯೂ ಬರೆಯಬಹುದು.

346 –
162
184

- ಕಿಚ್ಚು ಅಬಾಕಸ್‌ನಲ್ಲಿ ಮಾಡಿದ ಸಂಖ್ಯೆ 876 ಆಗಿದೆ. ಚಿಪ್ಪಿ ಮಾಡಿದ್ದು 697 ಆಗಿದೆ. ಕಿಚ್ಚುವಿನ ಸಂಖ್ಯೆಯು ಚಿಪ್ಪಿಯ ಸಂಖ್ಯೆಗಿಂತ ಎಷ್ಟು ಹೆಚ್ಚಾಗಿರುವುದು?

- ನಿಮ್ಮ ಕೈಯಲ್ಲಿ 13 ಮಣಿಗಳಿವೆ. ಅವುಗಳನ್ನು ಉಪಯೋಗಿಸಿ ಅಬಾಕಸ್‌ನಲ್ಲಿ ಮಾಡಬಹುದಾದ ಅತಿ ದೊಡ್ಡ ಮೂರಂಕೆ ಸಂಖ್ಯೆ ಮತ್ತು ಅತಿ ಸಣ್ಣ ಮೂರಂಕೆ ಸಂಖ್ಯೆ ಯನ್ನು ಬರೆಯಿರಿ. ಅವುಗಳೊಳಗಿನ ವ್ಯತ್ಯಾಸ ಎಷ್ಟು ?

ದೊಡ್ಡ ಮೂರಂಕೆ ಸಂಖ್ಯೆ ________________

ಸಣ್ಣ ಮೂರಂಕೆ ಸಂಖ್ಯೆ ________________

ವ್ಯತ್ಯಾಸ ________________

## ಸರಿ ಉತ್ತರ ಯಾವುದು?

- 761 – 380 ಯಾವೆಲ್ಲಾ ಸಂಖ್ಯೆಗಳೆಡೆಯಲ್ಲಾಗಿದೆ?

i) 400 ಮತ್ತು 500 ರ ಎಡೆಯಲ್ಲಿ

ii) 400 ಮತ್ತು 420 ರ ಎಡೆಯಲ್ಲಿ

iii) 380 ಮತ್ತು 400 ರ ಎಡೆಯಲ್ಲಿ

iv) 350 ಮತ್ತು 380 ರ ಎಡೆಯಲ್ಲಿ

ನನ್ನ ಉತ್ತರ

________________________________

**ಕಳೆದು ನೋಡುವ**

8 – 1 = 7

88 – 11 = ............

888 – 111= ............

8888 – 1111= ............

## ಕಂಡುಹಿಡಿಯುವ ... ಬಹುಮಾನಗಳಿಸುವ...

ಈ ದಿನ ಆಟದಲ್ಲಿ ಕಿಚ್ಚು ಮತ್ತು ಗೆಳೆಯರೊಂದಿಗೆ ಕಿಚ್ಚುವಿನ ಅಕ್ಕ ಅಮ್ಮು ಕೂಡಾ ಸೇರಿಕೊಂಡಳು.









3542 + 8 = 3550

3550 + 50 = 3600

3600 + 100 = 3700

3700 + 98 = 3798

8 + 50 + 100 + 98 = 100 + 98 + 58

= 100 + 98 + 2 + 56

= 100 + 100 + 56

= **256**

ಹೀಗೆಯೂ ಬರೆಯಬಹುದು.

| ಸಾವಿರ | ನೂರು | ಹತ್ತು | ಒಂದು | |
|---|---|---|---|---|
| 3 | 7 | 9 | 8 | − |
| 3 | 5 | 4 | 2 | |
| | 2 | 5 | 6 | |



ಬಹುಮಾನ ಗಳಿಸಲಿರುವ ಇನ್ನೊಂದು ಸೂಚನೆ ಮನೆಯ ಅಂಗಳದಲ್ಲಿದೆ.

ಇತರ ಯಾವೆಲ್ಲಾ ರೀತಿಯಲ್ಲಿ ಕಂಡುಹಿಡಿಯಬಹುದು?




| ಸಾವಿರ | ನೂರು | ಹತ್ತು | ಒಂದು | |
|---|---|---|---|---|
| 5 | 8 | 4 | 9 | − |
| 2 | 6 | 1 | 7 | |
| | | | | |




## ನಾನು ಬರೆದದ್ದು

- ......... ಸಾವಿರ ......... ನೂರು ......... ಹತ್ತು ......... ಒಂದು ಎಂಬಿವುಗಳು ಸೇರಿದ ಸಂಖ್ಯೆ ಯಾವುದು?
- ......... , ......... ಎಂಬಿವುಗಳನ್ನು ಕೂಡಿಸುವಾಗ ಲಭಿಸುವ ಸಂಖ್ಯೆ ಯಾವುದು?

## ಹೆಚ್ಚಿನ ಪ್ರಶ್ನೆಗಳನ್ನು ಬರೆಯಿರಿ...

- 
- 
- 

## ಬಹುಮಾನ

2837 ಮತ್ತು 524 ರ ನಡುವಿನ ವ್ಯತ್ಯಾಸ ಎಷ್ಟು?









## ಗಣಿತ ಪೆಟ್ಟಿಗೆ

ಕಿಚ್ಚು ತನ್ನ ಗೆಳೆಯರೊಂದಿಗೆ ಗಣಿತ ಪೆಟ್ಟಿಗೆಯಲ್ಲಿರುವ ಚೌಕಗಳ ಗುಂಪುಗಳನ್ನುಪಯೋಗಿಸಿ ಆಟವಾಡಲು ಆಲದ ಮರದ ಕೆಳಗೆ ಬಂದನು.

ಚಿತ್ರ ನೋಡಿರಿ...



ಇದರಲ್ಲಿ ಎಷ್ಟು ಸಾವಿರಗಳಿವೆ? ____________

ಎಷ್ಟು ನೂರುಗಳಿವೆ? ____________

ಎಷ್ಟು ಹತ್ತುಗಳಿವೆ? ____________

ಎಷ್ಟು ಒಂದುಗಳಿವೆ? ____________

ಸಂಖ್ಯೆ ಯಾವುದು? ____________

**ಪಝಲ್ ಕಾರ್ನರ್**

ನಾನು ಐದು ಸಾವಿರ ಮತ್ತು
ಎಂಟು ಸಾವಿರದ
ಎಡೆಯಲ್ಲಿರುವ ಸಮಸಂಖ್ಯೆ.
ಅನುಕ್ರಮವಾದ 4
ಅಂಕೆಯಾಗಿರುವೆನು.
ನಾನು ಯಾರು?

ಇದರಲ್ಲಿ 1251 ಚೌಕಗಳಿಗೆ ಮಿನ್ನಿ ಬಣ್ಣ ಹಚ್ಚಿದಳು.

## ಬಣ್ಣ ಹಚ್ಚಿರಿ.

ನೀವೂ ಕೂಡ 1251 ಚೌಕಗಳಿಗೆ ಬಣ್ಣ ಹಚ್ಚಿರಿ.



ನೂರರ ಒಂದು ಚೌಕ ಗುಂಪನ್ನು 10 ರ 10 ತುಂಡುಗಳಾಗಿ ಮಾಡಿದರೋ?

ಬಣ್ಣ ಹಚ್ಚದ ಚೌಕಗಳಲ್ಲಿ

ಸಾವಿರಗಳ ಸಂಖ್ಯೆ ____________

ನೂರುಗಳ ಸಂಖ್ಯೆ ____________

ಹತ್ತುಗಳ ಸಂಖ್ಯೆ ____________

ಒಂದುಗಳ ಸಂಖ್ಯೆ ____________

ಸಂಖ್ಯೆ ____________

| ಸಾವಿರ | ನೂರು | ಹತ್ತು | ಒಂದು | |
|---|---|---|---|---|
| 2 | 3 | 4 | 3 | − |
| 1 | 2 | 5 | 1 | |

ಹೀಗೆ ಬದಲಾಯಿಸಿ ಬರೆಯುವ.

| ಸಾವಿರ | ನೂರು | ಹತ್ತು | ಒಂದು | |
|---|---|---|---|---|
| 2 | 2 | 14 | 3 | − |
| 1 | 2 | 5 | 1 | |
| .......... | ........ | .......... | ........ | |

## ಕಡಿಮೆಮಾಡುವ

ಚೌಕಗಳ ಗುಂಪನ್ನು ಉಪಯೋಗಿಸಿ
3625 ರಿಂದ 1812 ಕಳೆಯಿರಿ.

ವ್ಯತ್ಯಾಸ ಕಂಡುಕೊಂಡ ರೀತಿ ನೋಟ್ ಪುಸ್ತಕದಲ್ಲಿ ಬರೆಯಿರಿ...

## ವಿದ್ಯುತ್ ಬಿಲ್




ಕಿಚ್ಚುವಿನ ಮನೆಯ ಈ ತಿಂಗಳ ವಿದ್ಯುತ್ ರೀಡಿಂಗ್ 4526.

ಹಿಂದಿನ ರೀಡಿಂಗ್ 3845.

ಕಿಚ್ಚುವಿನ ಮನೆಯ ವಿದ್ಯುತ್ ಬಳಕೆಯನ್ನು ಲೆಕ್ಕಮಾಡಿದ ರೀತಿಯನ್ನು ನೋಡಿರಿ...

### ರೀತಿ - 1

4526 – 3845




5 + 50 + 100 + 526 = 681

## ರೀತಿ - 2

4000 + 500 + 20 + 6 –
3000 + 800 + 40 + 5

4000 + 400 + 120 + 6 –
3000 + 800 + 40 + 5

3000 + 1400 + 120 + 6 –
3000 + 800 + 40 + 5
600 + 80 + 1

| ಸಂಖ್ಯೆ | ಸಾವಿರ | ನೂರು | ಹತ್ತು | ಒಂದು |
|---|---|---|---|---|
| 4526 | 3 | 14 | 12 | 6 – |
| 3845 | 3 | 8 | 4 | 5 |
| | | 6 | 8 | 1 |

4526 – 3845
4526 – 3000 = 1526
1526 – 800 = 726
726 – 45 = 681



ಹೀಗೆಯೂ ಬರೆಯಬಹುದು.

| | 3 | 14 | 12 | |
|---|---|---|---|---|
| 4 | 5 | 2 | 6 | – |
| 3 | 8 | 4 | 5 | |
| | 6 | 8 | 1 | |

## ಮೀಟರ್ ರೀಡಿಂಗ್

ಕಿಚ್ಚುವಿನ ಗೆಳೆಯರ ಮನೆಯ ಮೀಟರ್ ರೀಡಿಂಗ್ ಕೆಳಗಿನ ಪಟ್ಟಿಯಲ್ಲಿ ಕೊಡಲಾಗಿದೆ. ಪಟ್ಟಿಯನ್ನು ಪೂರ್ತಿಗೊಳಿಸಿರಿ.

| ಹೆಸರು | ಮೀಟರ್ ರೀಡಿಂಗ್ | | 2 ತಿಂಗಳ ವಿದ್ಯುತ್ ಉಪಯೋಗ |
|---|---|---|---|
| | ಫೆಬ್ರವರಿ | ಎಪ್ರಿಲ್ | |
| ಚಿಪ್ಪಿ | 4215 | 4826 | ………………… |
| ಜೀನ | ………………… | 5278 | 400 |
| ಫಾರಿಶ್ | 6970 | 7340 | ………………… |
| ಮಿನ್ನಿ | 5870 | ………………… | 395 |

ಯಾರ ಮನೆಯಲ್ಲಿ ಅತಿ ಹೆಚ್ಚು ವಿದ್ಯುತ್ ಉಪಯೋಗಿಸಲಾಯಿತು?

______________

ನಿಮ್ಮ ಮನೆಯ ಈ ತಿಂಗಳ ವಿದ್ಯುತ್ ರೀಡಿಂಗ್ ಎಷ್ಟು?

______________

## ಸರ್ಕಸ್






ಕಿಚ್ಚು ಮತ್ತು ಕುಟುಂಬದವರು ಸರ್ಕಸ್ ಡೇರೆಗೆ ಬಂದು ಟಿಕೆಟ್ ಪಡೆದರು.

4 ಜನರ ಟಿಕೆಟ್‌ಗೆ ಎಷ್ಟು ರೂಪಾಯಿ? ____________

ಐನೂರು ರೂಪಾಯಿಯ ಎರಡು ನೋಟುಗಳನ್ನು ಕೌಂಟರ್‌ಗೆ ಕೊಟ್ಟರು. ಬಾಕಿ ಎಷ್ಟು ರೂಪಾಯಿ ಸಿಕ್ಕಿತು? ____________

**ರೀತಿ - 1**

| | | | | |
|---|---|---|---|---|
| 1000 | – | 540 | | |
| 540 | + | 60 | = | 600 |
| 600 | + | 400 | = | 1000 |
| 60 | + | 400 | = | 460 |

**ರೀತಿ - 2**

$$1000 - 540 = (1000 - 1) - (540 - 1)$$
$$= 999 - 539$$
$$= 460$$

**ರೀತಿ - 3**

| | | | | |
|---|---|---|---|---|
| 1000 | – | 540 | | |
| 1000 | – | 500 | = | 500 |
| 500 | – | 40 | = | 460 |

| ಸಾವಿರ | ನೂರು | ಹತ್ತು | ಒಂದು | |
|---|---|---|---|---|
| 1 | 0 | 0 | 0 | – |
| | 5 | 4 | 0 | |

| ಸಾವಿರ | ನೂರು | ಹತ್ತು | ಒಂದು | |
|---|---|---|---|---|
| | 9 | 10 | 0 | – |
| | 5 | 4 | 0 | |
| .......... | ...... | ....... | ....... | |



ಹೀಗೆಯೂ ಬರೆಯಬಹುದು

$$\begin{array}{r} 1000 - \\ 540 \\ \hline \mathbf{460} \end{array}$$

| | | | | |
|---|---|---|---|---|
| 1000 | – | 100 | = | 900 |
| 1000 | – | 500 | = | ............ |
| 1000 | – | 250 | = | ............ |
| 1000 | – | 820 | = | ............ |
| 1000 | – | 990 | = | ............ |

## ನೋಟುಗಳು... ನಾಣ್ಯಗಳು...

ಸರ್ಕಸ್ ನೋಡಲು ಹೋದಾಗ ಲಭಿಸಿದ ಬಾಕಿ ಹಣವನ್ನು ನೋಟುಗಳಾಗಿಯೂ ನಾಣ್ಯಗಳಾಗಿಯೂ ಬರೆಯಿರಿ.






















ಎಷ್ಟು ನೋಟುಗಳು? __________

ಎಷ್ಟು ನಾಣ್ಯಗಳು? __________

100 ರೂಪಾಯಿಯ ನೋಟುಗಳು ಮತ್ತು 10 ರೂಪಾಯಿಯ ನೋಟುಗಳು ಮಾತ್ರವಾಗಿರುತ್ತಿದ್ದರೆ ಎಷ್ಟು ನೋಟುಗಳು ಸಿಗಬಹುದಿತ್ತು?

ಈ ಮೊತ್ತವನ್ನು 10 ನೋಟುಗಳಾಗಿ ಕೊಡುವುದಾದರೆ ಯಾವ ಯಾವ ನೋಟುಗಳು ಎಷ್ಟರಂತೆ ಬೇಕು?

## ಉಳಿತಾಯ




ಕಿಚ್ಚು ಮತ್ತು ಮಿನ್ನು ಆಟದ ನೋಟುಗಳನ್ನುಪಯೋಗಿಸಿ ಬ್ಯಾಂಕ್ ಆಟವನ್ನು ಆಡುತ್ತಿದ್ದಾರೆ. ಪಾಸ್ ಪುಸ್ತಕದಲ್ಲಿ ಬರೆದ ಸಂಖ್ಯೆಗಳನ್ನು ನೋಡಿರಿ.

| ಹೆಸರು : ಕಿಚ್ಚು | | | |
|---|---|---|---|
| ಈಗ ಇರುವುದು | | ಹಿಂಪಡೆದದ್ದು | |
| ತಾರೀಕು | ಮೊತ್ತ | ತಾರೀಕು | ಮೊತ್ತ |
| 14.10.2025 | 5484 | 14.10.2025 | 3295 |

ಕಿಚ್ಚುವಿನ ಉಳಿತಾಯದಿಂದ 3295 ರೂಪಾಯಿ ಹಿಂಪಡೆಯಲಾಯಿತು. ಹಾಗಾದರೆ ಬಾಕಿ ಎಷ್ಟು ರೂಪಾಯಿ ಇದೆ?

**ರೀತಿ - 1**

5484 – 3295

5000 – 3000 = 2000

484 – 300 = 184

484 – 295 = 184 + 5 = 189

2000 + 189 = 2189



**ರೀತಿ - 2**

5484 – 3295

**ನಾನು ಲೆಕ್ಕಮಾಡಿದ ರೀತಿ**

**ಇನ್ನೊಂದು ರೀತಿ**

ಮಿನ್ನಿಯ ಪಾಸ್ ಪುಸ್ತಕ ನೋಡಿ ಖಾತೆಯಲ್ಲಿ ಬಾಕಿ ಉಳಿದಿರುವ ಮೊತ್ತವನ್ನು ಕಂಡುಹಿಡಿಯಿರಿ.

| ಹೆಸರು : ಮಿನ್ನಿ | | | |
|---|---|---|---|
| ಈಗ ಇರುವುದು | | ಹಿಂಪಡೆದದ್ದು | |
| ತಾರೀಕು | ಮೊತ್ತ | ತಾರೀಕು | ಮೊತ್ತ |
| 14.10.2025 | 4971 | 14.10.2025 | 2784 |

ಮಿನ್ನಿಯ ಉಳಿತಾಯದಿಂದ 2784 ರೂಪಾಯಿ ಹಿಂಪಡೆದರೆ ಬಾಕಿ ಉಳಿಯುವ ಹಣ ____________

**ನಾನು ಲೆಕ್ಕಮಾಡಿದ ರೀತಿ**

**ಇನ್ನೊಂದು ರೀತಿ**

**ಪಝಲ್ ಕಾರ್ನರ್**

**ಸಂಖ್ಯೆ ಯಾವುದು?**

ಒಂದು ನಾಲ್ಕಂಕೆ ಸಂಖ್ಯೆಯೊಂದಿಗೆ 6349 ಕೂಡಿಸಿದಾಗ 8778 ಸಿಕ್ಕಿತು. ಸಂಖ್ಯೆ ಯಾವುದು?

## ವ್ಯಾಪಾರದ ಆಟ

ಮರುದಿನ ಗೆಳೆಯರೆಲ್ಲಾ ಸೇರಿ ಆಲದ ಮರದ ಕೆಳಗೆ ಅಂಗಡಿ ತೆರೆದರು.
ಹಿಂಪಡೆದ ಹಣದೊಂದಿಗೆ ಮಿನ್ನಿ ಮತ್ತು ಕಿಚ್ಚು ಅಂಗಡಿಗೆ ತಲುಪಿದರು.






### ಅಂಗಡಿಯಿಂದ ಖರೀದಿಸಿದ್ದು

ಕಿಚ್ಚು

ಶೂಸ್
ಫುಟ್ಬಾಲ್
ಬ್ಯಾಗ್

ಮಿನ್ನಿ

ಬ್ಯಾಟ್
ಕೊಡೆ

ಸಾಮಗ್ರಿಗಳನ್ನು ಖರೀದಿಸಿದ ನಂತರ ಕಿಚ್ಚುವಿನ ಕೈಯಲ್ಲಿ ಎಷ್ಟು ರೂಪಾಯಿ ಬಾಕಿ ಇರುವುದು?

ಮಿನ್ನಿಯ ಕೈಯಲ್ಲೋ?

**ಕಿಚ್ಚುವಿನ ಕೈಯಲ್ಲಿ ಬಾಕಿ ಇರುವ ಹಣ**

**ಮಿನ್ನಿಯ ಕೈಯಲ್ಲಿ ಬಾಕಿ ಇರುವ ಹಣ**

ಜೀನಾಳಿಗೆ ಸೈಕಲ್ ಖರೀದಿಸಬೇಕು. ಜೀನಾಳ ಕೈಯಲ್ಲಿ 4275 ರೂಪಾಯಿ ಇದೆ.

ಸೈಕಲ್ ಖರೀದಿಸಲು ಇನ್ನೆಷ್ಟು ರೂಪಾಯಿ ಬೇಕು?

ಸೈಕಲ್‌ನ ಬೆಲೆ ____________

**ನಾನು ಲೆಕ್ಕ ಮಾಡಿದ ರೀತಿ**

1. ಮುಂದಿನ ಮೂರು ಸಂಖ್ಯೆಗಳನ್ನು ಬರೆಯಿರಿ.

   - 6772, 6572, 6372, ____________ , ____________ , ____________
   - 2365, 2254, 2143, ____________ , ____________ , ____________
   - 5368, 5438, 5508, ____________ , ____________ , ____________

2. ಕಿಚ್ಚುವಿನ ಮನೆಗೆ ಒಂದು ತಿಂಗಳ ದಿನಸಿ ಸಾಮಗ್ರಿಗಳನ್ನು ಖರೀದಿಸಲು 5372 ರೂಪಾಯಿ ಆಯಿತು. ಕೈಯಲ್ಲಿದ್ದ 3685 ರೂಪಾಯಿ ನೀಡಿದನು. ಬಾಕಿ ಹಣ ಯು.ಪಿ.ಐ. ಮಾಡಿದನು. ಯು.ಪಿ.ಐ. ಮಾಡಿದ ಹಣ ಎಷ್ಟು?

3. 8 ಸಾವಿರ 27 ಹತ್ತು 5 ಒಂದು ಸೇರಿದ ಸಂಖ್ಯೆಯಿಂದ 43 ನೂರು 57 ಹತ್ತು ಸೇರಿದ ಸಂಖ್ಯೆಯನ್ನು ಕಳೆಯಿರಿ.

4. ನಿಮ್ಮ ಕೈಯಲ್ಲಿ 18 ಮಣಿಗಳಿವೆ. ಇವುಗಳನ್ನುಪಯೋಗಿಸಿ ಅಬಾಕಸ್‌ನಲ್ಲಿ ತಯಾರಿಸಬಹುದಾದ ಅತಿ ದೊಡ್ಡ ನಾಲ್ಕಂಕೆ ಸಂಖ್ಯೆ ಮತ್ತು ಅತಿ ಸಣ್ಣ ನಾಲ್ಕಂಕೆ ಸಂಖ್ಯೆಯನ್ನು ಬರೆಯಿರಿ. ಇವುಗಳೊಳಗಿನ ವ್ಯತ್ಯಾಸವನ್ನು ಬರೆಯಿರಿ?

# ಭಾರತದ ಸಂವಿಧಾನ

ಭಾಗ IV ಕ

## ಕರ್ತವ್ಯಗಳು

**51 ಕ. ಮೂಲಭೂತ ಕರ್ತವ್ಯಗಳು - ಈ ಕೆಳಗಿನವುಗಳು ಭಾರತದ ಪ್ರತಿಯೊಬ್ಬ ಪೌರನ ಕರ್ತವ್ಯಗಳಾಗಿವೆ.**

(ಕ) ಸಂವಿಧಾನವನ್ನು ಅನುಸರಿಸುವುದು, ಅದರ ಆದರ್ಶಗಳನ್ನು, ಸಂಸ್ಥೆಗಳನ್ನು ರಾಷ್ಟ್ರಧ್ವಜವನ್ನು ಮತ್ತು ರಾಷ್ಟ್ರಗೀತೆಯನ್ನು ಗೌರವಿಸುವುದು;

(ಖ) ನಮ್ಮ ರಾಷ್ಟ್ರೀಯ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸ್ಫೂರ್ತಿದಾಯಕವಾದ ಉದಾತ್ತ ಆದರ್ಶಗಳನ್ನು ಪೋಷಿಸುವುದು ಮತ್ತು ಅನುಸರಿಸುವುದು.

(ಗ) ಭಾರತದ ಸಾರ್ವಭೌಮತೆಯನ್ನು, ಏಕತೆಯನ್ನು ಮತ್ತು ಅಖಂಡತೆಯನ್ನು ಗೌರವಿಸುವುದು ಹಾಗೂ ಸಂರಕ್ಷಿಸುವುದು.

(ಘ) ದೇಶವನ್ನು ರಕ್ಷಿಸಲು ಮತ್ತು ರಾಷ್ಟ್ರಕ್ಕೆ ಸೇವೆ ಸಲ್ಲಿಸಲು ಕರೆ ಬಂದಾಗ ಅದನ್ನು ಅನುಸರಿಸುವುದು.

(ಙ) ಧಾರ್ಮಿಕ, ಭಾಷಿಕ ಮತ್ತು ಪ್ರಾದೇಶಿಕ ಅಥವಾ ಜಾತಿ ಪಂಗಡಗಳ ಭಿನ್ನತೆಗಳಿಂದ ಅತೀತವಾಗಿ ಭಾರತದ ಎಲ್ಲ ಜನತೆಯಲ್ಲಿ ಸಾಮರಸ್ಯವನ್ನು ಮತ್ತು ಭ್ರಾತೃತ್ವದ ಭಾವನೆಯನ್ನು ಬೆಳೆಸುವುದು, ಸ್ತ್ರೀಯರ ಗೌರವಕ್ಕೆ ಕುಂದುಂಟುಮಾಡುವ ಆಚರಣೆಯನ್ನು ಬಿಟ್ಟು ಬಿಡುವುದು.

(ಚ) ನಮ್ಮ ಸಂಸ್ಕೃತಿಯ ಭವ್ಯ ಪರಂಪರೆಯನ್ನು ಗೌರವಿಸುವುದು ಹಾಗೂ ಕಾಪಾಡುವುದು.

(ಛ) ಅರಣ್ಯಗಳು, ಸರೋವರಗಳು, ನದಿಗಳು ಮತ್ತು ವನ್ಯಜೀವಿಗಳು ಸೇರಿದಂತೆ ನೈಸರ್ಗಿಕ ಪರಿಸರವನ್ನು ಸಂರಕ್ಷಿಸುವುದು ಹಾಗೂ ಅಭಿವೃದ್ಧಿ ಮಾಡುವುದು, ಪ್ರಾಣಿಗಳಿಗೆ ಅನುಕಂಪ ತೋರಿಸುವುದು.

(ಜ) ವೈಜ್ಞಾನಿಕ ಮನೋಭಾವ, ಮಾನವೀಯತೆ, ಜಿಜ್ಞಾಸೆ ಮತ್ತು ಸುಧಾರಣ ಪ್ರವೃತ್ತಿಯನ್ನು ಬೆಳೆಸುವುದು.

(ಝ) ಸಾರ್ವಜನಿಕ ಸೊತ್ತನ್ನು ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು.

(ಞ) ರಾಷ್ಟ್ರವು ನಿರಂತರವಾಗಿ ಸಾಧನೆ ಮತ್ತು ಸಿದ್ಧಿಯ ಔನ್ನತ್ಯಕ್ಕೆ ತಲುಪಲು ವೈಯಕ್ತಿಕ ಹಾಗೂ ಸಾಮಾಜಿಕ ಚಟುವಟಿಕೆಯ ಎಲ್ಲ ಕಾರ್ಯಕ್ಷೇತ್ರಗಳಲ್ಲಿ ಪ್ರಾಮಾಣಿಕವಾಗಿ ಶ್ರಮಿಸುವುದು.

(ಟ) ಆರರಿಂದ ಹದಿನಾಲ್ಕು ವರ್ಷಗಳ ನಡುವಿನ ತನ್ನ ಮಕ್ಕಳಿಗೋ, ತನ್ನ ರಕ್ಷಣೆಯಲ್ಲಿರುವ ಮಕ್ಕಳಿಗೋ ಆಯಾ ಸಂದರ್ಭಾನುಸಾರ ಹೆತ್ತವರೋ ರಕ್ಷಕರೋ ವಿದ್ಯಾಭ್ಯಾಸಕ್ಕಿರುವ ಅವಕಾಶವನ್ನು ಏರ್ಪಡಿಸುವುದು.

# ಮಕ್ಕಳ ಹಕ್ಕುಗಳು

ಪ್ರೀತಿಯ ಮಕ್ಕಳೇ,

ನಿಮ್ಮ ಹಕ್ಕುಗಳ ಕುರಿತು ತಿಳಿಯಬೇಕಲ್ಲವೇ? ಹಕ್ಕುಗಳ ಕುರಿತಾಗಿರುವ ತಿಳುವಳಿಕೆಯು ನಿಮ್ಮ ಭಾಗವಹಿಸುವಿಕೆ, ಸಂರಕ್ಷಣೆ, ಸಾಮಾಜಿಕ ನ್ಯಾಯ ಎಂಬಿವುಗಳನ್ನು ಖಾತರಿಪಡಿಸಲು ಪ್ರೇರಣೆಯನ್ನೂ ಪ್ರಚೋದನೆಯನ್ನೂ ನೀಡುತ್ತದೆ. ನಿಮ್ಮ ಹಕ್ಕುಗಳನ್ನು ಸಂರಕ್ಷಿಸಲು ಈಗ ಒಂದು ಆಯೋಗವು ಕಾರ್ಯಾಚರಿಸುತ್ತಿದೆ. 'ಕೇರಳ ಪ್ರಾಂತ್ಯ ಮಕ್ಕಳ ಹಕ್ಕು ಸಂರಕ್ಷಣ ಆಯೋಗ' ಎಂದು ಅದರ ಹೆಸರು. ನಿಮ್ಮ ಹಕ್ಕುಗಳು ಯಾವುವು ಎಂದು ನೋಡೋಣ.

- ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ.
- ಜೀವ ಮತ್ತು ವ್ಯಕ್ತಿ ಸ್ವಾತಂತ್ರ್ಯದ ರಕ್ಷಣೆ.
- ಪರಿಪೂರ್ಣವಾದ ಬದುಕು ಹಾಗೂ ವಿಕಾಸದ ಹಕ್ಕು.
- ಜಾತಿ, ಮತ, ವರ್ಗ, ವರ್ಣ ಎಂಬ ಚಿಂತನೆಗಳನ್ನು ಮೀರಿ ಗೌರವಿಸಲ್ಪಡುವ ಮತ್ತು ಅಂಗೀಕರಿಸಲ್ಪಡುವ ಹಕ್ಕು.
- ದೈಹಿಕ, ಮಾನಸಿಕ ಹಾಗೂ ಲೈಂಗಿಕ ದೌರ್ಜನ್ಯಗಳಿಂದ ರಕ್ಷಣೆ ಪಡೆಯಲೂ ಶುಶ್ರೂಷೆ ಪಡೆಯಲೂ ಇರುವ ಹಕ್ಕು.
- ಬಾಲ ಕಾರ್ಮಿಕತನದಿಂದ ಹಾಗೂ ಅಪಾಯಕಾರಿ ಕೆಲಸಗಳಿಂದ ಬಿಡುಗಡೆ.
- ಪಾಲ್ಗೊಳ್ಳುವಿಕೆಯ ಹಕ್ಕು.
- ಬಾಲ್ಯವಿವಾಹದಿಂದ ರಕ್ಷಣೆ.
- ವೈಯಕ್ತಿಕ ಸಂಸ್ಕೃತಿಯನ್ನು ಅರಿತುಕೊಂಡು ಅದನ್ನು ಅನುಸರಿಸಿ ಬದುಕುವ ಸ್ವಾತಂತ್ರ್ಯ.
- ನಿರ್ಲಕ್ಷ್ಯಕ್ಕೆ ಒಳಗಾಗದಂತೆ ಸಂರಕ್ಷಣೆ.
- ಉಚಿತ ಹಾಗೂ ಕಡ್ಡಾಯ ಶಿಕ್ಷಣದ ಹಕ್ಕು.
- ಕಲಿಯಲೂ ಆಟವಾಡಲೂ ಇರುವ ಹಕ್ಕು.
- ಪ್ರೀತಿ ಹಾಗೂ ರಕ್ಷಣೆಯನ್ನು ಒದಗಿಸುವ ಕುಟುಂಬ ಹಾಗೂ ಸಮಾಜವನ್ನು ಪಡೆಯುವ ಹಕ್ಕು.

### ನಿಮ್ಮ ಕೆಲವು ಜವಾಬ್ದಾರಿಗಳು

- ಶಾಲೆ, ಸಾರ್ವಜನಿಕ ಸೊತ್ತುಗಳನ್ನು ಹಾನಿ ಮಾಡದೆ ರಕ್ಷಿಸುವುದು.
- ಶಾಲೆಯಲ್ಲಿ ಹಾಗೂ ಕಲಿಕಾ ಚಟುವಟಿಕೆಗಳಲ್ಲಿ ಶಿಸ್ತು ಪಾಲಿಸುವುದು.
- ಶಾಲಾ ಅಧಿಕಾರಿಗಳನ್ನು, ಅಧ್ಯಾಪಕರನ್ನು, ಹೆತ್ತವರನ್ನು ಹಾಗೂ ಸಹಪಾಠಿಗಳನ್ನು ಗೌರವಿಸುವುದು ಮತ್ತು ಅಂಗೀಕರಿಸುವುದು.
- ಜಾತಿ, ಮತ, ವರ್ಗ, ವರ್ಣ ಇತ್ಯಾದಿ ಚಿಂತನೆ ಗಳನ್ನು ಮೀರಿ ಇತರರನ್ನು ಗೌರವಿಸಲೂ ಅಂಗೀಕರಿಸಲೂ ಸಿದ್ಧರಾಗುವುದು.


*ಸಂಪರ್ಕಿಸಬೇಕಾದ ವಿಳಾಸ:*

**ಕೇರಳ ಪ್ರಾಂತ್ಯ ಮಕ್ಕಳ ಹಕ್ಕು ಸಂರಕ್ಷಣ ಆಯೋಗ**

ಶ್ರೀ ಗಣೇಶ್, ಟಿ.ಸಿ. 14/2036, ವಾನ್ ರೋಸ್ ಜಂಕ್ಷನ್, ತಿರುವನಂತಪುರ - 34

ದೂರವಾಣಿ 0471 - 2326603

ಇ- ಮೇಲ್: childrightscpcr@kerala.gov.in, rtecpcr@kerala.gov.in

ವೆಬ್ ಸೈಟ್ : www.kescpcrkerala.gov.in.

ಮಕ್ಕಳ ಸಹಾಯವಾಣಿ : 1098, ಅಪರಾಧ ನಿಯಂತ್ರಣ : 1090, ನಿರ್ಭಯ : 1800 425 1400

ಕೇರಳ ಪೋಲೀಸ್ ಸಹಾಯವಾಣಿ : 0471 - 3243000/44000/45000


***Online R.T.E Monitoring : www.nireekshana.org.in***